ಉಪನ್ಯಾಸ
ಗ್ರಂಥಮಾಲೆ

೧೮೦

ಭಾರತದ ವಾಣಿಜ್ಯಾಭಿವೃದ್ಧಿ

ಸಿ. ಎಂ. ಕೊಟ್ಟೂರಸೆಟ್ಟಿ, ಎಂ.ಕಾಮ್.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೯೭೪

ಭಾರತದ ವಾಣಿಜ್ಯಾಭಿವೃದ್ಧಿ

ಉಪನ್ಯಾಸ ಗ್ರಂಥಮಾಲೆ

೧೮೦

ಭಾರತದ ವಾಣಿಜ್ಯಾಭಿವೃದ್ಧಿ

ಸಿ. ಎಂ. ಕೊಟ್ಟೂರಸೆಟ್ಟಿ, ಎಂ.ಕಾಮ್.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ಜನವರಿ, ೧೯೭೪

ಪ್ರಕಾಶಕರು :

ಎಸ್. ಎಸ್. ಒಡೆಯರ, ಎಂ. ಎ., ಎಲ್‌ಎಲ್. ಬಿ.
ರಜಿಸ್ಟ್ರಾರ್,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ಜನವರಿ, ೧೯೭೪
೫,೦೦೦ ಪ್ರತಿಗಳು

ಬೆಲೆ : ೨೫ ಪೈಸೆ

ಮುದ್ರಕರು :

ಸದಾನಂದ ಎಸ್. ಪವಾರ
ಸದಾನಂದ ಪ್ರಿಂಟರ್ಸ, ಮಾರ್ಕೆಟ್,
ಧಾರವಾಡ–೧

ಮುನ್ನುಡಿ

*****

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನ ಪ್ರಸಾರ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯುಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯಕ್ಕೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಉಪನ್ಯಾಸಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವ ವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂಥ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೧೭೪ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರ ಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೨೬-೧-೧೯೭೪

ಎಂ. ಜಯಲಕ್ಷ್ಮಮ್ಮಣ್ಣಿ
ಕುಲಪತಿ

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗವಿಸ್ತರಣ ಉಪನ್ಯಾಸ ಮಾಲೆಯಲ್ಲಿ ದಿನಾಂಕ ೧೦-೧-೧೯೭೩ ರಂದು ಬೆಳಗಾಂವಿ ಜಿಲ್ಲೆಯ ನಿಪ್ಪಾಣಿಯಲ್ಲಿ 'ಭಾರತದ ವಾಣಿಜ್ಯಾಭಿವೃದ್ಧಿ' ಎಂಬ ವಿಷಯದ ಮೇಲೆ ನಾನು ಕೊಟ್ಟ ಉಪನ್ಯಾಸದಿಂದ ಈ ಕಿರುಹೊತ್ತಿಗೆಯನ್ನು ತಯಾರಿಸಲಾಗಿದೆ. ಸಾಮಾನ್ಯ ಜನರನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ವಿಷಯ ವಿವೇಚನೆಯನ್ನು ಮಾಡಲಾಗಿದೆ. ಸುಲಭವಾದ ಶಿರೋನಾಮೆಗಳಲ್ಲಿ ವಿಷಯವನ್ನು ವಿಂಗಡಿಸಿ ಸರಳ ಭಾಷೆಯಲ್ಲಿ ವಿವರಿಸಲಾಗಿದೆ. ಅಲ್ಲದೆ ಆಯಾ ವಿಷಯದಲ್ಲಿ ಬರುವ ಅಂಕೆ ಸಂಖ್ಯೆಗಳನ್ನು ಸಂಬಂಧಿಸಿದ ಇತ್ತೀಚಿನ ಪತ್ರಿಕೆಗಳಿಂದ ಸಂಗ್ರಹಿಸಿಕೊಟ್ಟು, ಸಾಮಾನ್ಯ ಓದುಗರಿಗೆ ನಮ್ಮ ದೇಶದ ವಾಣಿಜ್ಯದ ವಿವಿಧ ಅಂಗಗಳು ಬೆಳೆದುಬಂದ ರೀತಿಯನ್ನು ಮತ್ತು ಅವುಗಳ ಉಪಯುಕ್ತತೆಯನ್ನು ತಿಳಿಸಿಕೊಡಲು ಪ್ರಯತ್ನಿಸಲಾಗಿದೆ. ನಾಗರಿಕತೆಯೊಂದಿಗೆ ವಾಣಿಜ್ಯವೂ ಬೆಳೆಯುತ್ತ ಬಂದು ಮಾನವನು ಸ್ವಾವಲಂಬನವನ್ನು ಕಳೆದುಕೊಂಡು ಪರಾವಲಂಬಿಯಾಗುತ್ತ ನಡೆದಂತೆ ಇಡೀ ಜಗತ್ತೇ ವಾಣಿಜ್ಯದ ಕ್ಷೇತ್ರವಾದುದನ್ನು ಮತ್ತು ಪರದೇಶಗಳೊಂದಿಗೆ ನಮ್ಮ ದೇಶದ ವ್ಯಾಪಾರವು ನಡೆದುಬಂದ ರೀತಿ ಹಾಗೂ

ಅವುಗಳಿಗೆ ಸಂಬಂಧಿಸಿದ ಸಂಸ್ಥೆಗಳು ಇತ್ಯಾದಿಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಈ ಪುಸ್ತಿಕೆಯ ವಿಷಯ ಸಮೀಕ್ಷೆಯಲ್ಲಿ ಕೆಲವು ಇಂಗ್ಲೀಷ ಹೊತ್ತಿಗೆಗಳ ನೆರವನ್ನು ಪಡೆದಿದ್ದೇನೆ. ಆಯಾ ಗ್ರಂಥಗಳ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಕಿರುಹೊತ್ತಿಗೆಯನ್ನು ಬರೆಯಲು ಪ್ರೋತ್ಸಾಹಿಸಿ ಅವಕಾಶವನ್ನು ಕಲ್ಪಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ.


ವಾಣಿಜ್ಯ ವಿಭಾಗ ಸಿ. ಎಂ. ಕೊಟ್ಟೂರಸೆಟ್ಟಿ
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೮-೧-೧೯೭೪

ಪ ರಿ ವಿ ಡಿ

ವಾಣಿಜ್ಯ ಎಂದರೇನು ?

ಮಾನವನ ಎಲ್ಲ ಚಟುವಟಿಕೆಗಳನ್ನು ಮುಖ್ಯವಾಗಿ ಎರಡು ವಿಭಾಗಗಳಲ್ಲಿ ವಿಂಗಡಿಸಬಹುದು: (೧) ಆರ್ಥಿಕ ಚಟುವಟಿಕೆಗಳು (೨) ಸಾಮಾಜಿಕ ಚಟುವಟಿಕೆಗಳು. ಆರ್ಥಿಕ ಚಟುವಟಿಕೆಗಳು ಉದ್ಯೋಗ(ವೃತ್ತಿ)ಯಲ್ಲಿ ತೊಡಗಿದ ಎಲ್ಲ ಕಾರ್ಯಕಲಾಪಗಳನ್ನು ಒಳಗೊಳ್ಳುತ್ತವೆ. ಎಲ್ಲ ಆರ್ಥಿಕ ಚಟುವಟಿಕೆಗಳ ಪ್ರಮುಖ ಲಕ್ಷಣವೆಂದರೆ ಸಂಪತ್ತನ್ನು ಉತ್ಪಾದಿಸುವುದು. ವಾಣಿಜ್ಯವು ಈ ಆರ್ಥಿಕ ಚಟುವಟಿಕೆಗಳ ಒಂದು ಅಂಗ. ಇದರ ಕಕ್ಷೆಯಲ್ಲಿ ಸರಕುಗಳನ್ನು ಮೂಲ ಸ್ಥಳದಿಂದ ಅಥವಾ ಉತ್ಪಾದನೆಯ ಸ್ಥಳದಿಂದ ಉಪಭೋಗದ ಸ್ಥಳಕ್ಕೆ ಸಾಗಿಸಿ ಅವುಗಳನ್ನು ಉಪಯುಕ್ತ ವಸ್ತುಗಳನ್ನಾಗಿ ನಿರ್ಮಿಸುವ ಕಾರ್ಯ ಮಾತ್ರ ಬರುತ್ತದೆ. ವಾಣಿಜ್ಯವು ಅರ್ಥಶಾಸ್ತ್ರದ ಮುಖ್ಯ ಅಂಶವಾದ ವಿನಿಮಯದ ಮೇಲೆ ಆಧರಿತವಾಗಿರುತ್ತದೆ ಮತ್ತು ಅದು ಉತ್ಪಾದನೆಗೆ ಸಹಾಯ ಮಾಡುತ್ತದೆ. ರೂಢಿಯಲ್ಲಿ 'ವ್ಯಾಪಾರ' ಮತ್ತು 'ವಾಣಿಜ್ಯ' ಎರಡನ್ನೂ ಸಮಾನಾರ್ಥ ಪದಗಳೆಂದು ಪರಿಗಣಿಸಲಾಗಿದೆ. ವ್ಯವಹಾರದಲ್ಲಿ ಈ ಎರಡೂ ಪದಗಳನ್ನು ಒಂದೇ ಅರ್ಥದಲ್ಲಿ ಉಪಯೋಗಿಸುತ್ತ ಇದ್ದೇವೆ. ಆದರೆ ಆಳವಾಗಿ ಆಲೋಚನೆ ಮಾಡಿದರೆ ಈ ಪದಗಳ ಅರ್ಥದಲ್ಲಿಯ ವ್ಯತ್ಯಾಸವು ಸ್ಪಷ್ಟವಾಗಿ

ಕಂಡು ಬರುತ್ತದೆ. ಕೇವಲ ಸರಕುಗಳನ್ನು ಕೊಳ್ಳುವ ಮತ್ತು ಮಾರಾಟ ಮಾಡುವ ಉದ್ಯಮಕ್ಕೆ 'ವ್ಯಾಪಾರ' ಎನ್ನ ಬಹುದು. ಈ ವ್ಯಾಪಾರ ಉದ್ಯಮವು 'ವಾಣಿಜ್ಯ'ದಲ್ಲಿ ಒಳಗೊಂಡಿದ್ದು, ಅದರ ಜೊತೆಗೆ ವ್ಯಾಪಾರಕ್ಕೆ ಸಹಾಯಕ ವಾಗಿರುವ ಇತರ ಉದ್ಯಮಗಳೂ ಅಡಕವಾಗಿರುತ್ತವೆ. ವ್ಯಾಪಾರ ಎಂಬ ಪದವು ಮಿತವಾದ ಅಥವಾ ಸಂಕುಚಿತಾರ್ಥ ದಲ್ಲಿಯೂ ಮತ್ತು 'ವಾಣಿಜ್ಯ' ಎಂಬ ಪದವು ವಿಶಾಲಾರ್ಥ ದಲ್ಲಿಯೂ ಉಪಯೋಗಿಸಲ್ಪಡುತ್ತದೆ.



ವಾಣಿಜ್ಯದ ಹುಟ್ಟು ಹಾಗೂ ಬೆಳವಣಿಗೆ

ವಾಣಿಜ್ಯದ ಹುಟ್ಟಿಗೆ ಪ್ರಮುಖ ಕಾರಣಗಳು ಸಂಕ್ಷಿಪ್ತವಾಗಿ ಕೆಳಗಿನಂತೆ ಇರುತ್ತವೆ :

೧) ಪ್ರಾಕೃತಿಕ ಸಂಪತ್ತುಗಳ ವೈವಿಧ್ಯತೆ ಮತ್ತು ಭೂಮಿಯ ತುಂಬ ಅವುಗಳ ಭೌಗೋಲಿಕ ವಿಂಗಡನೆ.

೨) ವ್ಯಕ್ತಿಗಳ ಭಿನ್ನಾಭಿರುಚಿಗಳು.

೩) ಪ್ರಾಕೃತಿಕ ಸಂಪತ್ತುಗಳ ವೈವಿಧ್ಯತೆಯು ಮತ್ತು ವ್ಯಕ್ತಿಗಳ ಅಭಿರುಚಿಯಲ್ಲಿಯ ಭಿನ್ನತೆಯ ಪರಿಣಾಮವಾಗಿ ಉಂಟಾಗುವ 'ಶ್ರಮವಿಭಜನೆ'.

ಈಗ ನಾವು ವಾಣಿಜ್ಯದ ಬೆಳವಣಿಗೆಯನ್ನು ಹಂತ ಹಂತವಾಗಿ ಪರಿಶೀಲಿಸೋಣ.

ವಾಣಿಜ್ಯದ ಬೆಳವಣಿಗೆಯ ಹಂತಗಳು

೧) **ಬೇಟೆಯಾಡುವ ಹಂತ (Hunting Stage) :** ಮಾನವನ ಇತಿಹಾಸದ ಹಿನ್ನೆಲೆಯನ್ನು ಸ್ಥೂಲವಾಗಿ ಪರಿಶೀಲಿಸಿದಲ್ಲಿ. ಆದಿಮಾನವನು ಆಹಾರ ಸಮಸ್ಯೆಯನ್ನು ಮಾತ್ರ

ತನ್ನ ಮುಖ್ಯ ಗುರಿಯಾಗಿಟ್ಟುಕೊಂಡು, ಅದಕ್ಕೋಸ್ಕರ ದಟ್ಟವಾದ ಕಾಡುಗಳಲ್ಲಿ ಸಂಚರಿಸುತ್ತ, ಹಣ್ಣು ಹಂಪಲು ಗಳನ್ನು ತಿನ್ನುತ್ತ, ಬೇಟೆಯಾಡಿ ಹೊಟ್ಟೆತುಂಬಿಸಿಕೊಳ್ಳುತ್ತಿದ್ದನು. ಅವನು ಮುಖ್ಯವಾಗಿ ಬೇಟೆಗಾರನಾಗಿದ್ದನು. ಕೆಲಕಾಲದ ನಂತರ, ಅವನು ಪ್ರಕೃತಿಯಲ್ಲಿ ದೊರೆತ ಕಲ್ಲು ಮತ್ತು ಮರದ ರೆಂಬೆಗಳಿಂದ ಬೇಟೆಗೆ ಬೇಕಾದ ಆಯುಧ ಗಳನ್ನು ತಯಾರುಮಾಡಿಕೊಂಡು ಬೇಟೆಯಾಡುವುದರಲ್ಲಿ ಒಂದು ಹೆಜ್ಜೆ ಮುಂದುವರಿದನು. ಈ ರೀತಿ ಆಹಾರ ಸಂಪಾದನೆಗಾಗಿ ಒಂಟಿಯಾಗಿ ಕಾಡುಗಳಲ್ಲಿ ಅಲೆದಾಡಿ, ಹಸಿಯ ಮಾಂಸ ತಿಂದು, ನದಿಯ ನೀರು ಕುಡಿದು, ಗುಹೆಗಳಲ್ಲಿ ಸುಖವಾಗಿ ವಾಸಿಸಿ ತೃಪ್ತನಾಗಿ ಕಾಲಕಳೆಯುತ್ತಿದ್ದನು.

ಹೀಗೆ ಎಷ್ಟೋ ವರ್ಷಗಳ ಕಾಲ ಜೀವನ ನಡೆಸಿದ ನಂತರ, ಅವನಿಗೆ ಈ ರೀತಿಯ ಒಂಟಿ ಜೀವನದಲ್ಲಿ ಬೇಸರ ಬಂದು ತನ್ನ ಸುಖ ದುಃಖಗಳಲ್ಲಿ ಭಾಗಿಯಾಗಲು ಹೆಣ್ಣನ್ನು ಒಲಿಸಿ ಕೊಂಡು ದಾಂಪತ್ಯ ಜೀವನವನ್ನು ಪ್ರಾರಂಭಿಸಿದನು. ದಾಂಪತ್ಯಜೀವನವೇ ಈಗಿನ ಶ್ರಮವಿಭಜನೆಗೆ (Division of labour) ಮೂಲವೆಂದು ಹೇಳಬಹುದು.

ಈ ರೀತಿಯ ಒಂಟಿ ಜೀವನ ಕ್ರಮದಲ್ಲಿ ತನ್ನ ಕುಟುಂಬದ ಸಂರಕ್ಷಣೆ ಅವನಿಗೆ ಬಹಳ ಕಷ್ಟವಾಗಿ ಕಂಡಿರಬೇಕು. ತನ್ನಂತೆಯೇ ಜೀವನ ನಡೆಸುತ್ತಿದ್ದ ಇತರ ಮಾನವರೊಡನೆ

ಕೂಡಿ ಸಂಘ ಜೀವನ ನಡೆಸಲು ಆರಿಸಿದನು. ಈ ಸಂಘ ಜೀವನದಲ್ಲಿ ದುಡಿಮೆಯ ವಿಭಜನೆ ಇನ್ನೂ ಕೊಂಚ ಮುಂದುವರಿಯಿತೆಂದು ಹೇಳಬಹುದು—ಕೆಲವರು ಆಹಾರ ಸಂಪಾದನೆ, ಮತ್ತೆ ಕೆಲವರು ಆಯುಧಗಳನ್ನು ತಯಾರಿಸುವುದು, ಇನ್ನು ಕೆಲವರು ಗುಂಪಿನ ಸಂರಕ್ಷಣೆ ಮಾಡುವುದು ಇತ್ಯಾದಿ. ಹೀಗೆ ಒಂದು ಗುಂಪಿನ ಜನರು ತಮ್ಮ ತಮ್ಮಲ್ಲಿ ಕಾರ್ಯಗಳನ್ನು ವಿಭಾಗ ಮಾಡಿಕೊಂಡು ತಮ್ಮ ಶ್ರಮದ ಪ್ರತಿಫಲವನ್ನು ಇತರರೊಂದಿಗೆ ಹಂಚಿಕೊಳ್ಳುತ್ತ ತಮ್ಮ ಸ್ವಾವಲಂಬನವನ್ನು ಕಳೆದುಕೊಂಡು ಸಂಘಜೀವಿಗಳಾಗುತ್ತ ಬಂದರು.

೨) ವಸ್ತು ವಿನಿಮಯ ಹಂತ (Barter Stage) : ಕ್ರಮೇಣ ನಾಗರಿಕತೆ ಪ್ರಗತಿಹೊಂದಿದಂತೆ, ಮಾನವನು ದನಕರುಗಳನ್ನು ಸಾಕುವುದನ್ನು, ಮೀನು ಹಿಡಿಯುವದನ್ನು ಹಾಗೂ ಇತರ ವ್ಯವಸಾಯಗಳನ್ನು ಕಂಡುಹಿಡಿದನು. ಈ ವ್ಯವಸಾಯ ಬದಲಾವಣೆಯಿಂದಾಗಿ, ಶ್ರಮವಿಭಜನೆಯ ಉಪಯುಕ್ತತೆಯನ್ನು ಅರಿತುಕೊಂಡು, ತಾನು ಹೆಚ್ಚು ಹೆಚ್ಚು ಬೆಳೆದದ್ದನ್ನು ತನ್ನ ಇತರ ಅವಶ್ಯಕತೆಗಳ ಪೂರೈಕೆಗಾಗಿ ವಿನಿಮಯ ಮಾಡಲು ವಿನಿಮಯ ಪದ್ಧತಿಯನ್ನು ಪ್ರಾರಂಭ ಮಾಡಿದನು. ಹಣದ ಸಹಾಯವಿಲ್ಲದೆ ವಸ್ತುಗಳನ್ನು ವಸ್ತುಗಳಿಗಾಗಿ ವಿನಿಮಯ ಮಾಡಿಕೊಳ್ಳುವ ಕ್ರಮಕ್ಕೆ ವಸ್ತುಗಳ ವಿನಿಮಯ ಪದ್ಧತಿ ಅಥವಾ ಸಾಟಿ ಪದ್ಧತಿ ಅಥವಾ ಅದಲು ಬದಲು ಪದ್ಧತಿ ಎಂದು ಕರೆಯುತ್ತಾರೆ.

೩) **ಗ್ರಾಮೀಣ ಆರ್ಥಿಕ ವ್ಯವಸ್ಥೆ:** ಮಾನವನ ಮೂರನೆಯ ಆರ್ಥಿಕ ವ್ಯವಸ್ಥೆಯಲ್ಲಿ ಬೇಸಾಯ ಮತ್ತು ಗ್ರಾಮೀಣ ಆರ್ಥಿಕ ವ್ಯವಸ್ಥೆ ಕಂಡುಬರುತ್ತದೆ. ಆಗ ಬೇಸಾಯವು ಮೂಲ ಉದ್ದಿಮೆಯಾಯಿತು. ಇದರೊಂದಿಗೆ ಒಂದು ಕಡೆ ಶಾಶ್ವತ ವಾಸ ಪ್ರಾರಂಭವಾಯಿತು. ಇದರಿಂದ ಗ್ರಾಮೀಣ ಅರ್ಥ ವ್ಯವಸ್ಥೆ ಶಾಶ್ವತವಾಗಿ ಸ್ಥಾಪಿತವಾಯಿತು. ಆಗ ಮಾನವನ ಅವಶ್ಯಕತೆಗಳು ಅನೇಕ ಬಗೆಯವಾದವು ಮತ್ತು ಗ್ರಾಮದಲ್ಲಿ ನಿಯಮಿತ ದುಡಿತದಿಂದ ಅವು ಪೂರೈಸಲ್ಪಡುವಂತಾದವು. ಉತ್ಪಾದಕರ ಮತ್ತು ಗ್ರಾಹಕರ ಅಥವಾ ಬಳಕೆದಾರರ ನಡುವೆ ಮಧ್ಯಸ್ಥಗಾರಿಕೆ ಸ್ಥಾಪಿತವಾಯಿತು. ಗ್ರಾಮಸ್ಥರು ಕೇವಲ ತಮ್ಮ ಉಪಭೋಗಕ್ಕಲ್ಲದೆ, ಮಾರಾಟದ ಸಲುವಾಗಿಯೂ ಉತ್ಪಾದಿಸತೊಡಗಿದರು. ಆದರೆ ಮಾರುಕಟ್ಟೆ ಮಾತ್ರ ಸ್ಥಳೀಯವಾಗಿತ್ತು ಮತ್ತು ಪ್ರಾರಂಭದಲ್ಲಿ ಆಯಾ ಗ್ರಾಮಕ್ಕೆ ಮಾತ್ರ ಸೀಮಿತವಾಗಿತ್ತು.

ಈ ವೇಳೆಗೆ ವಸ್ತು ವಿನಿಮಯ ಪದ್ಧತಿಯಲ್ಲಿ ಕಂಡುಬಂದ ದೋಷಗಳು ಹಲವಾರು ಸಮಸ್ಯೆಗಳನ್ನು ಒಡ್ಡಿದ್ದವು. ವಸ್ತು ವಿನಿಮಯ ಪದ್ಧತಿಯಲ್ಲಿ ಪರಸ್ಪರ ಅವಶ್ಯಕತೆಗಳು ಹೊಂದಿಕೊಂಡಿರಬೇಕಾಗುತ್ತದೆ. ಆದ್ದರಿಂದ ಪ್ರಾರಂಭದಲ್ಲಿ ಒಂದು 'ಪದಾರ್ಥ ಅಥವಾ ವಸ್ತು' ವಿನಿಮಯ ಮಾಧ್ಯಮವಾಗಿ ಮತ್ತು ಮೌಲ್ಯ ಮಾಪನಕ್ಕಾಗಿ ಆರಿಸಲ್ಪಟ್ಟಿತು. ಇದರಿಂದ ಚರ್ಮ, ಗೋದಿ, ದನಕರು ಮುಂತಾದವುಗಳು ಬೇರೆ ಬೇರೆ

ಸಮಾಜದಲ್ಲಿ ಹಣವೆಂದು ನಿರ್ಧರಿಸಲ್ಪಟ್ಟವು. ಮುಂದೆ, ಬರುಬರುತ್ತ ಈ ವಿನಿಮಯ ಮಾಧ್ಯಮದಲ್ಲಿ ಉಪವಿಭಜನೆಯ ಅಸಾಧ್ಯತೆ, ನಶ್ವರತೆ ಮುಂತಾದ ದೋಷಗಳು ಕಂಡು ಬಂದುವು. ಈ ತೊಂದರೆಗಳನ್ನು ಹೋಗಲಾಡಿಸಲು ಬರು ಬರುತ್ತ ಲೋಹಗಳನ್ನು ಹಣದಂತೆ ಚಲಾಯಿಸುವುದು ಪ್ರಾರಂಭವಾಯಿತು. ಕಂಚು, ಕಬ್ಬಿಣ, ಬೆಳ್ಳಿ, ಬಂಗಾರ ಮುಂತಾದ ಲೋಹಗಳ ತುಂಡುಗಳ ಮೌಲ್ಯವನ್ನು, ಮೊದಲು ತೂಕಮಾಡಿ ತದನಂತರ ಮುದ್ರೆಯೊತ್ತಿ ನಿರ್ಧರಿಸಲಾಯಿತು. ಲೋಹದ ನಾಣ್ಯಗಳು ಬಳಕೆಯಲ್ಲಿ ಬಂದನಂತರ ವಾಣಿಜ್ಯದ ಅಭಿವೃದ್ಧಿಗೆ ಬಹಳ ಉತ್ತೇಜನ ಸಿಕ್ಕಿತು. ಕ್ರಮೇಣ ತೂಕ ಅಳತೆಗಳನ್ನು ವ್ಯವಹಾರದಲ್ಲಿ ಬಳಸಲಾಯಿತು. ಮುಂದೆ ಬರುಬರುತ್ತ ವಿನಿಮಯಕ್ಕಾಗಿ ಹಣದ ಸಂಶೋಧನೆಯಾಯಿತು.

೪) ನಗರ ಆರ್ಥಿಕ ವ್ಯವಸ್ಥೆ : ನಾಗರಿಕತೆಯು ಬೆಳೆದು ಬಂದಂತೆ ಮತ್ತು ವ್ಯಾಪಾರದಲ್ಲಿ ಸಾಹಸ ಪ್ರಗತಿಗಳ ಹೆಚ್ಚಳದಿಂದಾಗಿ ದೊಡ್ಡ ದೊಡ್ಡ ಹಳ್ಳಿಗಳು ಪಟ್ಟಣಗಳಾಗಿ ಮಾರ್ಪಟ್ಟವು. ಆಗ ಒಂದು ನಿರ್ದಿಷ್ಟ ಮಾರುಕಟ್ಟೆಗಾಗಿ ಉತ್ಪಾದನೆ ಪ್ರಾರಂಭವಾಯಿತು. ಉತ್ಪಾದನಾ ಮೂಲಗಳು ನೆಲೆಗಟ್ಟಾದಲ್ಲಿ ಹೊಸ ಹೊಸ ಪಟ್ಟಣಗಳು ಉದ್ಭವಿಸಿದವು; ಪಟ್ಟಣಗಳು ವಾಣಿಜ್ಯ ಉದ್ದಿಮೆಗಳಲ್ಲಿ ವಿಶೇಷತೆ ಪಡೆದವು. ಹಳ್ಳಿಗಳು ಬೇಸಾಯ ಮತ್ತು ಅದಕ್ಕೆ ಸಂಬಂಧಿಸಿದ ಪೂರಕ

ವ್ಯವಸಾಯಗಳಲ್ಲಿ ವಿಶೇಷತೆ ಪಡೆದವು. ಪಟ್ಟಣಗಳು ಕಚ್ಚಾ ಸರಕು ಮತ್ತು ಆಹಾರ ಧಾನ್ಯಗಳಿಗಾಗಿ ಹಳ್ಳಿಗಳನ್ನು ಅವಲಂಬಿಸಿದವು ಮತ್ತು ಅವುಗಳ ಬದಲಾಗಿ ಸಿದ್ಧವಸ್ತುಗಳನ್ನು ಪೂರೈಸುತ್ತಿದ್ದವು. ಪಟ್ಟಣದಲ್ಲಿಯ ವ್ಯಾಪಾರ, ಥೋಕ ಮತ್ತು ಕಿರುಕುಳವೆಂದು ವಿಭಜನೆಯಾಯಿತು. ಮುಂದೆ ಕಾಲಕ್ರಮದಲ್ಲಿ ವಾಣಿಜ್ಯ ಸಂಘಟನೆಯು ಬೇರೆ ಬೇರೆ ರೂಪತಾಳಿತು—ಉದಾ: ಏಕಮೇವ ಒಡೆತನ ವ್ಯಾಪಾರೀ ಸಂಸ್ಥೆ, ಪಾಲುಗಾರಿಕೆ ಸಂಸ್ಥೆ, ಸಂಯುಕ್ತ ಬಂಡವಾಳ ಸಂಸ್ಥೆ ಇತ್ಯಾದಿ. ಮುಂದೆ ಅನೇಕ ಪಟ್ಟಣಗಳು ವ್ಯಾಪಾರಿ ಕೇಂದ್ರಗಳಾಗಿ ಬೆಳೆದವು. ಹಣ ವಿನಿಮಯ, ಉದ್ದರಿ ವ್ಯವಹಾರ, ಬೆಲೆ ನಿರ್ದಿಷ್ಟಪಡಿಸುವ ನಿಯಮಿತ ಪದ್ಧತಿಗಳು ಸಾವಕಾಶವಾಗಿ ಪ್ರಾರಂಭವಾಗಿ ಬರುಬರುತ್ತ ಭದ್ರವಾಗಿ ಸ್ಥಾಪಿಸಲ್ಪಟ್ಟವು.

ವಾಣಿಜ್ಯದ ಧ್ಯೇಯ

ಮಾನವ ಜೀವನದ ಮೊದಲ ಹಂತಗಳಲ್ಲಿ ವಾಣಿಜ್ಯದ ಪ್ರಭಾವ ಹೆಚ್ಚಾಗಿರಲಿಲ್ಲ. ನಾಗರಿಕತೆಯು ಬೆಳೆದು ಬಂದಂತೆ ವಾಣಿಜ್ಯವು ಬೆಳೆದು ಬಂದಿತು. ನಾಗರಿಕತೆಯು ಬೆಳೆದು ಮಾನವನ ಜೀವನ ವಿಕಾಸಹೊಂದಿ ಅದು ಸುಲಭವಾಗುತ್ತ ಬಂದಾಗಿನಿಂದ, ಮಾನವ ಸ್ವಾವಲಂಬನೆಯನ್ನು ಕಳೆದುಕೊಂಡನು. ಸ್ವಾವಲಂಬನೆಯು ಮಾಯವಾಗುತ್ತ ಬಂದಂತೆ, ವಾಣಿಜ್ಯವು ಅಭಿವೃದ್ಧಿ ಹೊಂದುತ್ತ ನಡೆಯಿತು.

ಇಂದಿನ ಯಾವದೇ ಅಭಿವೃದ್ಧಿ ಹೊಂದಿದ ರಾಷ್ಟ್ರದಲ್ಲಿ ಸ್ವಾವಲಂಬನೆ ಎಂಬುದೇ ಇಲ್ಲ. ರಾಷ್ಟ್ರಗಳ ಅಭಿವೃದ್ಧಿ, ಜನಜೀವನದ ಬದುಕಿನ ರೀತಿ, ಮತ್ತು ಆರ್ಥಿಕ ಪರಿಸ್ಥಿತಿ ಪರರಾಷ್ಟ್ರಗಳನ್ನು ಅವಲಂಬಿಸಿವೆ. ಈ ಪರಾವಲಂಬನೆಯಲ್ಲಿ ವಾಣಿಜ್ಯವು ಪ್ರಮುಖ ಸ್ಥಾನವನ್ನು ಪಡೆದಿದೆ. ಇದಲ್ಲದೆ ಕೈಗಾರಿಕೆ ಮತ್ತು ವಾಣಿಜ್ಯ ಉದ್ಯಮಗಳೇ ಕೆಲವು ದೇಶಗಳಲ್ಲಿ ಪ್ರಮುಖ ಕಸಬುಗಳಾಗಿವೆ—ಉದಾ : ಇಂಗ್ಲಂಡ, ಜರ್ಮನಿ ಮೊದಲಾದವುಗಳು.

ವಾಣಿಜ್ಯ ಮತ್ತು ವ್ಯಾಪಾರಗಳ ಧ್ಯೇಯವೇನು ? ವಾಣಿಜ್ಯ ವ್ಯಾಪಾರಗಳ ಬೆಳವಣಿಗೆ ಆಗಿರುವುದು ಕೆಲವು

ವ್ಯಕ್ತಿಗಳ ಅಥವಾ ಕೆಲವು ದೇಶಗಳ ಉದ್ಧಾರಕ್ಕಾಗಿಯೊ? ಅಥವಾ ಪ್ರಪಂಚದ ಸಮಸ್ತ ಜನತೆಯ ಕಲ್ಯಾಣಕ್ಕಾಗಿಯೊ? ಧನಾರ್ಜನೆಯೋ ವ್ಯಾಪಾರದ ಅಂತಿಮ ಗುರಿಯೊ? ಇವೇ ಮೊದಲಾದ ಪ್ರಶ್ನೆಗಳು ಸ್ವಾಭಾವಿಕವಾಗಿ ಉದ್ಭವಿಸುತ್ತವೆ. ವಾಣಿಜ್ಯದ ಮುಖ್ಯವಾದ ಧ್ಯೇಯ ಜನತೆಯ ಕಲ್ಯಾಣ ಎಂಬುದರಲ್ಲಿ ಸಂದೇಹವಿಲ್ಲ. ಅನೇಕರಿಗೆ ವಾಣಿಜ್ಯವೇ ಮುಖ್ಯ ಜೀವನವೃತ್ತಿಯಾದಕಾರಣ ಧನಸಂಪಾದನೆಯು ಒಂದು ಮುಖ್ಯ ಗುರಿಯಾಗಿ ಪರಿಣಮಿಸಿದೆ. ಕೇವಲ ಲಾಭಗಳಿಸುವದನ್ನು ಮುಖ್ಯ ಗುರಿಯಾಗಿಟ್ಟುಕೊಂಡ ವ್ಯಾಪಾರಿಯು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾನೆ. ಅಂದರೆ ಕೇವಲ ಧನ ಸಂಪಾದನೆಗಾಗಿಯೇ ವ್ಯಾಪಾರವನ್ನು ವೃತ್ತಿಯಾಗಿ ಅವಲಂಬಿಸಬಾರದು ಎಂಬುದು ತಾತ್ಪರ್ಯ. ಅದರಲ್ಲಿಯೂ ಕಾಳಸಂತೆ, ಮೋಸ, ವಂಚನೆ ಇವುಗಳಿಗೆ ವಶನಾಗದೆ 'ವ್ಯವಹಾರ ಶೀಲ'ಕ್ಕೆ (Business Morality) ಅವನು ಹೆಚ್ಚು ಮಹತ್ವ ಕೊಟ್ಟು, ಕೇವಲ ಸ್ವಲ್ಪ ಅಥವಾ ನ್ಯಾಯವಾದ ಲಾಭಕ್ಕೆ ವಸ್ತು ವಿನಿಮಯ ಮಾಡುವದನ್ನು ವ್ಯಾಪಾರ ಧರ್ಮವನ್ನಾಗಿ ಅನುಸರಿಸಬೇಕು. ವಾಣಿಜ್ಯವು ಬೆಳೆಯುತ್ತ ನಡೆದಂತೆ, ವ್ಯಾಪಾರಿಯು ಅನೇಕ ಜನಗಳೊಡನೆ, ಅನೇಕ ಸಂಸ್ಕೃತಿಗಳೊಡನೆ ಸಂಪರ್ಕ ಹೊಂದಬೇಕಾಗುತ್ತದೆ. ಇದರಿಂದ ಅವನಲ್ಲಿ ಮಹತ್ತರವಾದ ಬದಲಾವಣೆಯಾಗಿ, ಅವನ ವ್ಯಕ್ತಿತ್ವದ ಪೂರ್ಣ ಬೆಳವಣಿಗೆಗೆ ಅವಕಾಶವಾಗುತ್ತದೆ.

೧೫ನೆಯ ಶತಮಾನದಷ್ಟರಲ್ಲಿ ಈವರೆಗೆ ವಿವರಿಸಿದ ನಾಲ್ಕು ಪ್ರಕಾರದ ಹಂತಗಳಾದ—ಬೇಟೆಯಾಡುವ ಹಂತ, ವಸ್ತು ವಿನಿಮಯ ಹಂತ, ಗ್ರಾಮೀಣ ಆರ್ಥಿಕ ವ್ಯವಸ್ಥೆ ಮತ್ತು ನಗರ ಆರ್ಥಿಕ ವ್ಯವಸ್ಥೆ ಹಾಗೂ ಉತ್ಪಾದನಾ ಪದ್ಧತಿ ಜಗತ್ತಿನ ಎಲ್ಲಾ ಕಡೆಗಳಲ್ಲಿಯೂ ಕಂಡುಬರುತ್ತಿದ್ದವು. ಭಾರತದಲ್ಲಿಯೂ ಸಹ ಊರ್ಜಿತಾವಸ್ಥೆಯಲ್ಲಿದ್ದ ಗ್ರಾಮೋದ್ಯೋಗಗಳಿದ್ದವು ಮತ್ತು ಪಟ್ಟಣಗಳು ವಾಣಿಜ್ಯ ಉದ್ದಿಮೆಯಲ್ಲಿ ವಿಶೇಷತೆ ಪಡೆದಿದ್ದವು.

ಮುಂದೆ ಭೌಗೋಳಿಕ ಶೋಧನೆಗಳಿಂದಾಗಿ ಮತ್ತು ಔದ್ಯೋಗಿಕ, ಸಾರಿಗೆಯ, ಹಾಗೂ ವಾಣಿಜ್ಯದ ಕ್ರಾಂತಿಗಳ ಫಲವಾಗಿ, ನಗರ ಆರ್ಥಿಕ ವ್ಯವಸ್ಥೆಯಿಂದ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಗಳಿಗೆ ಬದಲಾವಣೆಯಾಯಿತು.

೧೫ನೆಯ ಶತಮಾನದ ಉತ್ತರಾರ್ಧದಲ್ಲಿ ಸಂಭವಿಸಿದ ಭೌಗೋಳಿಕ ಶೋಧಗಳು ವಾಣಿಜ್ಯ ನಕ್ಷೆಯನ್ನು ಮಾರ್ಪಡಿಸಿದವು. ಮತ್ತು ಪರಿಣಾಮಕಾರಿಯಾಗುವಂತೆ ವಾಣಿಜ್ಯ ಕೇಂದ್ರಗಳನ್ನು ರಾಷ್ಟ್ರಪ್ರಮಾಣದಿಂದ ಅಂತರರಾಷ್ಟ್ರೀಯ ಮಟ್ಟಕ್ಕೆ ಬದಲಾಯಿಸಿದವು. ಇಲ್ಲಿ ಎದ್ದು ಕಾಣುವ ಶೋಧನೆಗಳಾವವೆಂದರೆ— (೧) ಭಾರತಕ್ಕೆ ಸಮುದ್ರ ಮಾರ್ಗ; (೨) ಹೊಸ ಜಗತ್ತಾದ ಅಮೇರಿಕೆ; (೩) ಆಸ್ಟ್ರೇಲಿಯಾ, ಫಿಲಿಫೈನ್ಸ್ ಮತ್ತು ನೆರೆ ಹೊರೆಯ ದ್ವೀಪಗಳ ಶೋಧ. ಭೂ ಪ್ರದಕ್ಷಿಣೆಯಿಂದ ಹಡಗುಗಳು ಒಂದು ಮಾರ್ಗವಾಗಿ ಹಿಂದಿರುಗ

ಬಹುದೆಂದು ಗೊತ್ತಾಯಿತು. ಇದು ವಾಣಿಜ್ಯಕ್ಕೆ ಪ್ರೋತ್ಸಾಹ ನೀಡಿತು.

ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಹೊಸ ಹೊಸ ಯಂತ್ರಗಳು ತಯಾರಾದವು ಮತ್ತು ಎಲ್ಲ ಉದ್ಯಮಗಳು ಯಾಂತ್ರೀಕರಣದಲ್ಲಿ ತೊಡಗಿದವು. ಇದರಿಂದಾಗಿ ದೊಡ್ಡ ದೊಡ್ಡ ಕಾರ್ಖಾನೆಗಳು ಸ್ಥಾಪಿಸಲ್ಪಟ್ಟು, ಉತ್ಪಾದನೆಯು ಹೆಚ್ಚತೊಡಗಿತು.

೧೮ ನೇ ಶತಮಾನದಲ್ಲಿ ಗ್ರೇಟ್ ಬ್ರಿಟನ್ನಿನಲ್ಲಿ ಔದ್ಯೋಗಿಕ ಕ್ರಾಂತಿಯಾಯಿತು. ಉಗಿ ಶಕ್ತಿಯಿಂದ ನಡೆಯುವ ಯಂತ್ರಗಳು ವಿದ್ಯುತ್ ಶಕ್ತಿಯಿಂದ ನಡೆಯಲು ಪ್ರಾರಂಭವಾದವು. ಇದರಿಂದಾಗಿ ಗ್ರೇಟ್ ಬ್ರಿಟನ್ನಿನಲ್ಲಿ ನೂಲಿನ ಬಟ್ಟೆಯ ಉದ್ದಿಮೆ ಮೂಲಭೂತ ಬದಲಾವಣೆಯನ್ನು ತಾಳಿತು. ಉಗಿ ಶಕ್ತಿ ಬಳಕೆಯಿಂದ ಕಲ್ಲಿದ್ದಲಿ ಉದ್ದಿಮೆಯಲ್ಲಿ ಗಣನೀಯ ಕ್ರಾಂತಿಯಾಯಿತು. ೧೯೧೪ ರಷ್ಟರಲ್ಲಿ ಯುರೋಪ ಮತ್ತು ಅಮೇರಿಕೆಯ ಬಹುತೇಕ ಎಲ್ಲ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿ ಸಂಪೂರ್ಣ ಪಸರಿಸಿತ್ತು. ಆದ್ದರಿಂದಲೇ ಈ ದೇಶಗಳು ಪ್ರಧಾನ ವಸ್ತು ತಯಾರಿಕೆಯ ಮತ್ತು ಉನ್ನತ ಅಭಿವೃದ್ಧಿಯ ದೇಶಗಳಾದವು. ಪಾಶ್ಚಿಮಾತ್ಯ ದೇಶಗಳ ಔದ್ಯೋಗಿಕ ಅಭಿವೃದ್ಧಿಯು ಭಾರತದ ಗ್ರಾಮೋದ್ಯೋಗಕ್ಕೆ ಧಕ್ಕೆಯುಂಟುಮಾಡಿತು. ಕ್ರಿ. ಶ. ೧೮೫೦ ರ ವರೆಗೆ ಭಾರತ ಬೇಸಾಯದ ನಾಡಾಗಿ ಉಳಿದಿತ್ತು ಮತ್ತು ಕಚ್ಚಾ ಸರಕು

ಗಳನ್ನು ಹಾಗೂ ಆಹಾರ ಪದಾರ್ಥಗಳನ್ನು ಪೂರೈಸುವ ದೇಶವಾಗಿಯೂ ಇದ್ದಿತು. ಭಾರತವು ಯುರೋಪದಲ್ಲಿ ತಯಾರಾಗುವ ವಸ್ತುಗಳ ಮಾರುಕಟ್ಟೆಯಾಯಿತು. ೧೮೫೦ ರ ನಂತರ ಭಾರತವು ಔದ್ಯೋಗಿಕ ಕ್ರಾಂತಿಯನ್ನು ಕಡ್ಡಾಯವಾಗಿ ಜಾರಿಯಲ್ಲಿ ತರಬೇಕಾಯಿತು. ಆದರೆ ರಾಜಕೀಯ ಅವಲಂಬನದಿಂದ ನಿಜವಾದ ಪ್ರಗತಿ ಸಾಧಿಸಲಿಲ್ಲ. ಪಶ್ಚಿಮ ದೇಶಗಳಲ್ಲಿ ಔದ್ಯೋಗಿಕ ಕ್ರಾಂತಿಯು ಹಿಂದೆಯೇ ಸಾರಿಗೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಕ್ರಾಂತಿಗಳಾದವು. ರೇಲ್ವೆಯ ಪ್ರಾರಂಭ, ಸ್ವಯಂ ಚಾಲಿತ ವಾಹನಗಳು, ಉಗಿಹಡಗುಗಳು ಮತ್ತು ವಿಮಾನ ಇವುಗಳು ಸಾರಿಗೆ ವಿಧಾನದಲ್ಲಿ ಕ್ರಾಂತಿಯನ್ನು ಮಾಡಿದವು. ಈ ನೂತನ ಸಾರಿಗೆ ವಿಧಾನಗಳಿಂದಾಗಿ ಪ್ರತಿಯೊಂದು ದೇಶವೂ ಒಂದೊಂದು ವಿಶಿಷ್ಟ ತರಹದ ವಸ್ತು ತಯಾರಿಕೆಯಲ್ಲಿ ತೊಡಗಿತು. ತಂತಿ, ದೂರವಾಣಿ, ಆಕಾಶ-ವಾಣಿ ಮುಂತಾದ ಸಂಪರ್ಕ ವಿಧಾನಗಳು ಅನೇಕ ವಸ್ತುಗಳಿಗೆ ವಿಶ್ವ ಮಾರುಕಟ್ಟೆಯನ್ನು ಕಲ್ಪಿಸಿಕೊಟ್ಟವು.

ಭಾರತದ ವಾಣಿಜ್ಯ

ಭಾರತದ ವಾಣಿಜ್ಯದ ಅಭಿವೃದ್ಧಿಯನ್ನು ನಾವು ಮುಖ್ಯ ವಾಗಿ ಎರಡು ವಿಭಾಗಗಳಲ್ಲಿ ಅಭ್ಯಸಿಸಬಹುದು :—

(೧) ಆಂತರಿಕ ವಾಣಿಜ್ಯ ಅಭಿವೃದ್ಧಿ

(೨) ಅಂತರರಾಷ್ಟ್ರೀಯ ವಾಣಿಜ್ಯ ಅಭಿವೃದ್ಧಿ

ಆಂತರಿಕ ವಾಣಿಜ್ಯ (Home Trade) : ಇದು ದೇಶದ ಗಡಿ ರೇಷೆಯ ಒಳಗೆ ಮಾಡುವ (೧) ಥೋಕ ಮತ್ತು (೨) ಕಿರುಕುಳ ವ್ಯಾಪಾರವನ್ನೊಳಗೊಂಡಿದೆ. ಭಾರ ತವು ಪ್ರಾಕೃತಿಕ ಸಂಪತ್ತಿನ ವೈವಿಧ್ಯತೆಯಿಂದ ಕೂಡಿದ ವಿಶಾಲ ರಾಷ್ಟ್ರವಾದ್ದರಿಂದ, ಆಂತರಿಕ ವ್ಯವಹಾರದ ಮೊತ್ತ ಬಹಳವಿದೆ. ಯೋಜನಾ ಆಯೋಗದ ಪ್ರಕಾರ, ೧೯೪೭ ರಲ್ಲಿ ಸ್ವದೇಶಿ ವ್ಯವ- ಹಾರದ ಮೌಲ್ಯ ರೂ. ೨೦೦೦ ಕೋಟಿಯಿದ್ದಿತು. ಅನಂತರ ಭಾರತವು ಯೋಜನೆಯ ಅವಧಿಯಲ್ಲಿ ವಾಣಿಜ್ಯದಲ್ಲಿ ಗಣ ನೀಯ ಪ್ರಗತಿ ಸಾಧಿಸಿದೆ. ವಾಣಿಜ್ಯದ ನಾನಾ ಅಂಗಗಳಾದ ಸಾರಿಗೆ, ವಿಮೆ, ಬ್ಯಾಂಕು, ಉಗ್ರಾಣ ಮುಂತಾದವುಗಳು ವಿವಿಧಮುಖ ಪ್ರಗತಿಯನ್ನು ಸಾಧಿಸಿ ಸುಸಂಬದ್ಧ ವಾಣಿಜ್ಯ ರಂಗಕ್ಕೆ ಅನುವು ಮಾಡಿಕೊಟ್ಟಿವೆ.

ಸಾರಿಗೆಯ ರಂಗದಲ್ಲಿ ರೈಲ್ವೆ, ರಸ್ತೆ, ಜಲಸಾರಿಗೆ ಮತ್ತು ವಾಯುಸಾರಿಗೆ ರಂಗಗಳು ಅಭಿವೃದ್ಧಿಹೊಂದಿ ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿವೆ.

ರೈಲ್ವೆಸಾರಿಗೆ ಉದ್ದಳತೆ– ೧೯೫೦–೫೧ ರಲ್ಲಿ ೫೩,೫೯೬ ಕಿ. ಮೀ. ಇದ್ದದ್ದು ೧೯೬೯–೭೦ ರಲ್ಲಿ ೫೯೬೪೮ ಕಿ. ಮೀ. ವರೆಗೆ ವಿಸ್ತಾರವಾಗಿದೆ. ರೈಲ್ವೆಸಾರಿಗೆ ಮುಖಾಂತರ ಸಾಗಿಸುವ ಸರಕುಗಳ ಪ್ರಮಾಣ : ೧೯೫೫–೫೬ ರಲ್ಲಿ ೧೧೬೦ ಲಕ್ಷ ಟನ್‌ಗಳಿದ್ದುದು ೧೯೬೯–೭೦ ರಲ್ಲಿ ೨೦೮೦ ಲಕ್ಷ ಟನ್‌ಗಳಿಗೆ ಏರಿದೆ.

ರಸ್ತೆಸಾರಿಗೆ– ೧೯೫೬ ರಲ್ಲಿ ೩೮೪೨೩೬ ಕಿ. ಮೀ. ಇದ್ದ ರಸ್ತೆ ೧೯೬೯–೭೦ ರಲ್ಲಿ ೯೬೪೫೫೫ ಕಿ. ಮೀ. ಉದ್ದ ಆಯಿತು. ರಸ್ತೆಗಳ ರಚನಾ ಕಾರ್ಯ ಮುಖ್ಯವಾಗಿ ಹಿಂದುಳಿದ ಪ್ರದೇಶಗಳಲ್ಲಿ ನಡೆದದ್ದರಿಂದ ಅದು ಒಕ್ಕಲುತನ ಹುಟ್ಟುವಳಿ ವ್ಯಾಪಾರ ಅಭಿವೃದ್ಧಿಗೆ ಬಹಳ ಉತ್ತೇಜನ ಕೊಟ್ಟಿದೆ.

ಭಾರತದಲ್ಲಿ ಅಂತರ ಜಲಮಾರ್ಗ : ಇದು ೧೪೦೦೦ ಕಿ. ಮೀ. ವರೆಗಿದೆ. ಏಪ್ರಿಲ್ ೧, ೧೯೭೧ ರ ವರೆಗೆ ೨೪೯ ಹಡಗುಗಳು ಇದ್ದವು. ಅವುಗಳಲ್ಲಿ ೬೬ ಹಡಗಗಳು ಸ್ವದೇಶಿ ವ್ಯಾಪಾರದಲ್ಲಿ, ೧೮೩ ಹಡಗಗಳು ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ತೊಡಗಿವೆ.

ಸಂಪರ್ಕ ವ್ಯವಸ್ಥೆಯು ಕೂಡ ಅಭಿವೃದ್ಧಿ ಹೊಂದಿದ್ದು, ಆದರಿಂದ ವಾಣಿಜ್ಯದ ಅಭಿವೃದ್ಧಿಗೆ ಹಲವಾರು ರೀತಿಯಿಂದ

ಸಹಾಯವಾಗಿವೆ. ಅಖಿಲ ಭಾರತ ಆಕಾಶವಾಣಿಯು ಸಾಂಸ್ಕೃತಿಕ ಹಾಗೂ ಭಾಷಾವಾರ ಪ್ರಾಂತಗಳಲ್ಲಿ ಒಟ್ಟು ೬೭ ಪ್ರಸಾರ ಕೇಂದ್ರಗಳನ್ನು ಹೊಂದಿದ್ದು ವ್ಯಾಪಾರದ ದೃಷ್ಟಿಯಿಂದ ಜಾಹೀರಾತಿಗೆ ಬಹಳ ಸಹಾಯಕವಾಗಿದೆ.

ಭಾರತದಲ್ಲಿ ಸುದ್ದಿಪ್ರಸಾರ ಪತ್ರಿಕೆಗಳು, ವಿವಿಧ ವ್ಯಾಪಾರದ ನಿಯತಕಾಲಿಕಗಳು ಕೂಡ ವ್ಯಾಪಾರದ ಅಭಿವೃದ್ಧಿಗೆ ಸಹಾಯ ಮಾಡಿವೆ. ೧೯೭೦ ರಲ್ಲಿ ದಿನಪತ್ರಿಕೆಗಳು, ವಾರಪತ್ರಿಕೆಗಳು ಹಾಗೂ ಮಾಸ ಪತ್ರಿಕೆಗಳು ಎಲ್ಲ ಸೇರಿ ಒಟ್ಟು ೧೧೦೩೬ ಪತ್ರಿಕೆಗಳು ಪ್ರಚಲಿತದಲ್ಲಿದ್ದವು.

ಪೋಸ್ಟ ಮತ್ತು ಟೆಲಿಗ್ರಾಫ್ ಶಾಖೆಗಳು ಕೂಡ ಅಭಿವೃದ್ಧಿ ಹೊಂದಿವೆ; ಪೋಸ್ಟ ಆಫೀಸುಗಳ ಸಂಖ್ಯೆ— ೧೯೫೦–೫೧ ರಲ್ಲಿ ೩೬೦೯೪ ಇದ್ದುದು ೧೯೬೯–೭೦ ರಲ್ಲಿ ೧೦೯೯೫೫ಕ್ಕೆ ಏರಿದೆ. ಟೆಲಿಗ್ರಾಫಿಕ್ ಆಫೀಸುಗಳ ಸಂಖ್ಯೆ ೧೯೫೦–೫೧ ರಲ್ಲಿ ೮೨೦೫ ಇದ್ದುದು ೧೯೬೯–೭೦ ರಲ್ಲಿ ೧೬೮೦೧ಕ್ಕೆ ಏರಿದೆ. ಟೆಲಿಫೋನುಗಳ ಸಂಖ್ಯೆ ೧೯೫೦-೫೧ ರಲ್ಲಿ ೧೬೮೦೦೦ ಇದ್ದುದು ೧೯೬೯-೭೦ ರಲ್ಲಿ ೧೨,೧೭,೦೦೦ಕ್ಕೆ ಏರಿದೆ. ಈ ರೀತಿ ಸಂಪರ್ಕ ಸಾಧನಗಳು ಅಭಿವೃದ್ಧಿ ಹೊಂದಿ ವ್ಯಾಪಾರ ಸಂಪರ್ಕಕ್ಕೆ ಬಹಳ ಸಹಾಯಕವಾಗಿವೆ.

ವಾಣಿಜ್ಯದ ಇನ್ನೊಂದು ಅಂಗವಾದ ವಿಮೆಯೂ ಕೂಡ ಬಹಳ ಪ್ರಗತಿ ಸಾಧಿಸಿದೆ. ಇದು ವ್ಯಾಪಾರದಲ್ಲಿ ನಷ್ಟಭಯ

ನಿವಾರಣೆಯಲ್ಲಿ ಸಹಾಯಕಾರಿಯಾಗಿದೆ. ೧೯೭೦ ರಲ್ಲಿ ಬೆಂಕಿ, ಜಲ ಹಾಗೂ ಸಾಮಾನ್ಯ ವಿಮೆಯ ಕಂಪನಿಗಳು ಒಟ್ಟು ೧೦೭ ಇದ್ದವು. ೧೯೭೩ ಮೇ ತಿಂಗಳದಲ್ಲಿ ಸಾಮಾನ್ಯ ವಿಮೆಯ ಕಂಪನಿಗಳನ್ನು ರಾಷ್ಟ್ರೀಕರಣ ಮಾಡಲಾಯಿತು.

ಬ್ಯಾಂಕ ವ್ಯವಸಾಯ: ಬ್ಯಾಂಕುಗಳು ಭಾರತದ ಉದ್ದಿಮೆ ಮತ್ತು ವ್ಯಾಪಾರಕ್ಕೆ ಮೊದಲಿನಿಂದಲೂ ಸಹಾಯ ಸಲ್ಲಿಸುತ್ತ ಬಂದಿವೆ. ಇವು ವಸ್ತುಗಳನ್ನು ಆಡವು ಇಟ್ಟುಕೊಂಡು ಮತ್ತು ಹಲವಾರು ವ್ಯಾಪಾರ ಕಾಗದಪತ್ರಗಳ ಆಧಾರದಮೇಲೆ ಸಾಲ ಕೊಡುತ್ತಿವೆ. ವಾಣಿಜ್ಯ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಔದ್ಯಮಿಕ ಬ್ಯಾಂಕುಗಳು, ವಿನಿಮಯ ಬ್ಯಾಂಕುಗಳು ಹಾಗೂ ಇತರ ಎಲ್ಲ ತರದ ಬ್ಯಾಂಕುಗಳು ವಾಣಿಜ್ಯ ಅಭಿವೃದ್ಧಿಗೆ ಹಣದ ಅಡಚಣೆಯನ್ನು ನಿವಾರಿಸಲು ಸಹಾಯಕವಾಗಿವೆ. ವಾಣಿಜ್ಯ ಬ್ಯಾಂಕುಗಳು ಭಾರತದ ಆರ್ಥಿಕ ರಂಗದ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗುವಂತೆ ಮಾಡುವ ಉದ್ದೇಶದಿಂದ, ಭಾರತ ಸರಕಾರವು ೧೯೬೯ ರಲ್ಲಿ ೧೪ ಪ್ರಮುಖ ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿತು. ಅನಂತರದಲ್ಲಿ ಬ್ಯಾಂಕಿನ ಅಭಿವೃದ್ಧಿ ಭರದಿಂದ ಸಾಗುತ್ತಲಿದೆ.

ಸಂಗ್ರಹ (Storage) : ವಿವಿಧ ಸರಕು-ಸಾಮಗ್ರಿಗಳ ಪರಿಚಲನೆಯಲ್ಲಿ 'ಸಂಗ್ರಹ' ಅತಿಮುಖ್ಯ ಹಾಗೂ ಅವಶ್ಯವಾದುದು. ಭಾರತದಲ್ಲಿ ಮೊದಲು ಉಗ್ರಾಣಗಳ ಅಥವಾ ಗುದಾಮುಗಳ ವ್ಯವಸ್ಥೆ ಸರಿಯಾಗಿದ್ದಿಲ್ಲವಾದುದರಿಂದ, ೧೦೦ಕ್ಕೆ

೭೫ ರಷ್ಟು ಒಕ್ಕಲಿಗರು ತಮ್ಮ ಸರಕುಗಳನ್ನು ಸುಗ್ಗಿಯಾದ ತಕ್ಷಣವೇ ಮಾರಿಬಿಡುತ್ತಿದ್ದರು. ಇದರಿಂದ ರೈತರಿಗೆ ಹಾನಿಯಾಗುತ್ತಿತ್ತು. ಭಾರತದ ರಿಜರ್ವ ಬ್ಯಾಂಕಿನಿಂದ ನಿಯಮಿಸಲ್ಪಟ್ಟಿದ್ದ 'ರೂರಲ್ ಕ್ರೆಡಿಟ್ ಸರ್ವೆ ಕಮಿಟಿ'ಯ ವರದಿಯು ಸಂಗ್ರಹಣದ ಅನನುಕೂಲತೆಗಳನ್ನು ಹೋಗಲಾಡಿಸಲು ಸಲಹೆಮಾಡಿತು. ಆದ್ದರಿಂದ ೧೯೫೬ ರಲ್ಲಿ "ಒಕ್ಕಲುತನ ಹುಟ್ಟುವಳಿ ಸುಧಾರಣಾ ಮತ್ತು ಉಗ್ರಾಣ ಕಾಯ್ದೆ" ಯನ್ನು ಜಾರಿಯಲ್ಲಿ ತರಲಾಯಿತು. ಇದಲ್ಲದೆ "ಕೇಂದ್ರ ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಉಗ್ರಾಣ ಮಂಡಳಿ" ಯನ್ನು ಸ್ಥಾಪಿಸಲಾಯಿತು. ಇದು ಸಂಗ್ರಹಣ, ಉಗ್ರಾಣ ಮುಂತಾದವುಗಳಿಗೆ ಸಹಾಯಮಾಡುತ್ತದೆ. ಇದಲ್ಲದೆ "ಕೇಂದ್ರ ಉಗ್ರಾಣ ಸಂಸ್ಥೆ" ಯೂ ಸ್ಥಾಪಿಸಲ್ಪಟ್ಟಿದೆ.

ವಸ್ತುಗಳ ವಿನಿಮಯದಲ್ಲಿ ಬರುವ ಸೇವಾಸಂಸ್ಥೆಗಳಾದ ಪ್ರಮಾಣೀಕರಣ ಮತ್ತು ವರ್ಗೀಕರಣ (Standardisation and Grading), ಮುದ್ರೆ ಒತ್ತುವಿಕೆ (Branding) ಮತ್ತು ಪ್ಯಾಕಿಂಗ್ ಮುಂತಾದವುಗಳು ಬಹಳ ಅಭಿವೃದ್ಧಿ ಹೊಂದಿವೆ. ಸಹಕಾರಿ ಮಾರಾಟ ಸಂಘಗಳು, ಮತ್ತು ಕ್ರಮಪಡಿಸಿದ ಪೇಟೆಗಳ (Regulated Market) ಬೆಳವಣಿಗೆಯಿಂದ ಒಕ್ಕಲುತನ ವಸ್ತುಗಳ ವ್ಯಾಪಾರದಲ್ಲಿ ಗಣನೀಯ ಪ್ರಗತಿಯಾಗಿದೆ.

ಭಾರತದ ವಸ್ತುಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ಭಾರತೀಯ ಗುಣಮಟ್ಟ ಸಂಸ್ಥೆಯು (Indian

Standards Institute) ಬಹಳ ಮಹತ್ವದ ಪಾತ್ರವಹಿಸಿದೆ. ಇದು ಇಲ್ಲಿಯವರೆಗೆ ೬೧೮೬ ವಸ್ತುಗಳ ಉತ್ತಮ ಗುಣಮಟ್ಟವನ್ನು ನಿರ್ಧರಿಸಿದೆ.

ಇಂದು ದೇಶದಲ್ಲಿ ಕಮಿಶನ್ ಏಜಂಟರು, ದಳ್ಳಾಳಿಗಳು, ದಲಾಲರು, ಹರಾಜು ಮಾಡುವವರು, ಗುತ್ತಿಗೆದಾರರು, ಆಯಾತ ಮತ್ತು ನಿರ್ಯಾತ ಮಾಡುವ ಪ್ರತಿನಿಧಿಗಳು, ಉಗ್ರಾಣ ಪಾಲಕರು ಸಾಕಷ್ಟು ಪ್ರಮಾಣದಲ್ಲಿ ಇದ್ದಾರೆ. ಲಾಭೋದ್ದೇಶವೇ ವ್ಯಾಪಾರದಲ್ಲಿಯ ಮುಖ್ಯ ಉದ್ದೇಶವಾಗಿದೆಯಾದರೂ, ಸರಕಾರದ ವಿವಿಧ ನಿಯಂತ್ರಣಗಳೊಂದಿಗೆ ವ್ಯಾಪಾರ ಸರ್ವ ಸಾಮಾನ್ಯನಿಗೆ ಅನುಕೂಲವಾಗುವ ರೀತಿಯಲ್ಲಿ ನಡೆದಿದೆ. ಈ ರೀತಿಯಾಗಿ ಭಾರತೀಯ ವಾಣಿಜ್ಯರಂಗ ಇಂದು ಸುಸಂಬದ್ಧವಾಗಿದ್ದು ಆರ್ಥಿಕ ಏಳಿಗೆಯಲ್ಲಿ ಬಹಳ ಸಹಕಾರಿಯಾಗಿದೆ.

ಭಾರತದ ಪರದೇಶ ವ್ಯಾಪಾರ

ರಾಷ್ಟ್ರ ರಾಷ್ಟ್ರಗಳ ನಡುವೆ ಸರಕುಗಳನ್ನು ವಿನಿಮಯ ಮಾಡುವದಕ್ಕೆ 'ಪರದೇಶ ವ್ಯಾಪಾರ' ಅಥವಾ 'ಅಂತರ ರಾಷ್ಟ್ರೀಯ ವ್ಯಾಪಾರ' ವೆನ್ನುವರು. ಸಾರಿಗೆ ಸಂಪರ್ಕಗಳಲ್ಲಿ ತೀವ್ರ ಬೆಳವಣಿಗೆ, ಜನಸಂಖ್ಯೆಯಲ್ಲಿ ಹೆಚ್ಚಳ, ಜಲಮಾರ್ಗಗಳ ಅಭಿವೃದ್ಧಿ, ಮುಂತಾದವುಗಳು ಜಗತ್ತಿನ ಎಲ್ಲ ಮಾರುಕಟ್ಟೆಗಳ ಅಭಿವೃದ್ಧಿಗೆ ಸಹಾಯ ಮಾಡಿದವು ಮತ್ತು ಸಂಶೋಧನೆಗಳು ಉತ್ಪಾದನೆಯನ್ನು ಹಾಗೂ ಅಂತರರಾಷ್ಟ್ರೀಯ ವ್ಯಾಪಾರವನ್ನು ಪ್ರೋತ್ಸಾಹಿಸಿದವು. ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಪರದೇಶ ವ್ಯಾಪಾರವು ಒಂದು ಮಹತ್ವದ ಪಾತ್ರವಹಿಸಿದೆ. ಭಾರತದ ಪರದೇಶ ವ್ಯಾಪಾರವನ್ನು ನಾವು ಎರಡು ಹಂತಗಳಲ್ಲಿ ಅಭ್ಯಸಿಸಬಹುದು: (೧) ಸ್ವಾತಂತ್ರ್ಯಪೂರ್ವದ ಪರದೇಶ ವ್ಯಾಪಾರ, ಮತ್ತು (೨) ಸ್ವಾತಂತ್ರ್ಯಾನಂತರದ ಪರದೇಶ ವ್ಯಾಪಾರ.

೧) ಸ್ವಾತಂತ್ರ್ಯಪೂರ್ವದ ಪರದೇಶವ್ಯಾಪಾರ : ಸೂಯೆಜ್ ಕಾಲುವೆಯ ಪ್ರಾರಂಭದಿಂದಾಗಿ ಹೊಸ ಸಾರು

ಕಟ್ಟೆಗಳು ಭಾರತದ ಸರಕುಗಳಿಗೆ ತೆರೆಯಲ್ಪಟ್ಟವು. ೧೮೬೯ ರಿಂದ ೧೯೧೪ ರ ನಡುವೆ, ಭಾರತದ ಪರದೇಶ ವ್ಯಾಪಾರದ ಸರಾಸರಿ ಬೆಲೆಯು ೯೦ ಕೋಟಿ ರೂಪಾಯಿಗಳಿಂದ ೩೭೬ ಕೋಟಿ ರೂಪಾಯಿಗಳಿಗೆ ಹೆಚ್ಚಿತು. ಮೊದಲನೆಯ ಜಾಗತಿಕ ಯುದ್ಧ ಹಾಗೂ ಅನಂತರದ ವರ್ಷಗಳಲ್ಲಿ ಕೂಡ ವ್ಯಾಪಾರಕ್ಕೆ ಒಳ್ಳೆಯ ಪ್ರೋತ್ಸಾಹ ದೊರೆಯಿತು. ಎರಡನೆಯ ಜಾಗತಿಕ ಮಹಾಯುದ್ಧ ಕಾಲದಲ್ಲಿ ಭಾರತವು ಬ್ರಿಟನ್ನಿಗೆ ಭಾರಿ ಪ್ರಮಾಣದಲ್ಲಿ ವಸ್ತುಗಳನ್ನು ನಿರ್ಯಾತ ಮಾಡಿತು. ಬ್ರಿಟನ್ನವು ಭಾರತದ ಪ್ರಮುಖ ಗಿರಾಕಿಯಾಗಿದ್ದು ವ್ಯಾಪಾರದ ನಿಲುವು ಅನುಕೂಲವಾಗಿತ್ತು (Favourable balance of trade). ೧೯೨೯ ರ ವರೆಗೆ ಪ್ರತಿವರ್ಷ ಸರಾಸರಿ ವ್ಯಾಪಾರ ೬೦೪ ಕೋಟಿ ರೂಪಾಯಿಗಳಷ್ಟಿತ್ತು. ೧೯೩೦ರ ದೊಡ್ಡ ಮುಗ್ಗಟ್ಟಿನ ವರ್ಷಗಳಲ್ಲಿ (Great Depression), ಬೇಡಿಕೆಯಲ್ಲಿ ತೀವ್ರ ಇಳಿತ ಹಾಗೂ ಒಕ್ಕಲುತನದ ಕಚ್ಚಾವಸ್ತುಗಳ ಬೆಲೆಯಲ್ಲಿ ಇಳಿತವಾದ್ದರಿಂದ, ಭಾರತದ ಪರದೇಶ ವ್ಯಾಪಾರವು ಬಹಳ ದೊಡ್ಡ ಮುಗ್ಗಟ್ಟನ್ನು ಎದುರಿಸಬೇಕಾಯಿತು. ಆದರೆ ಮುಂದೆ ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ, ಭಾರತ ದೇಶದ ವ್ಯಾಪಾರವು ಬಹಳ ಸುಧಾರಿಸಿತು. ೧೯೩೮–೩೯ ರಿಂದ ೧೯೪೭–೪೮ ರ ವರೆಗೆ ಆಯಾತ ಮತ್ತು ನಿರ್ಯಾತ ಎರಡೂ ವೃದ್ಧಿಯಾದುದನ್ನು ಈ ಕೆಳಗಿನ ಅಂಕಿ ಸಂಖ್ಯೆಗಳಿಂದ ಕಾಣಬಹುದು.

(ಕೋಟಿ ರೂಪಾಯಿಗಳಲ್ಲಿ)

ವರ್ಷ	ನಿರ್ಯಾತ	ಆಯಾತ	ವ್ಯಾಪಾರ ಶಿಲ್ಕು
೧೯೩೮–೩೯	೧೬೯.೧೯	೧೫೨.೩೪	೧೬.೮೫
೧೯೪೫–೪೬	೨೬೫.೫	೨೪೪.೮	೨೦.೬
೧೯೪೬–೪೭	೩೧೯.೨೮	೨೮೮.೪೩	೩೦.೪೫
೧೯೪೭–೪೮	೪೦೩.೧೯	೩೮೯.೬೨	೧೩.೫೭

ಈ ಅವಧಿಯಲ್ಲಿ ನಿರ್ಯಾತವು ಮುಖ್ಯವಾಗಿ ಒಕ್ಕಲುತನದ ಸರಕುಗಳು ಹಾಗೂ ಕಚ್ಚಾ ವಸ್ತುಗಳನ್ನೊಳಗೊಂಡಿತ್ತು. ಇವುಗಳಲ್ಲಿ ಮುಖ್ಯವಾದವುಗಳು— ಕಚ್ಚಾ ಹತ್ತಿ, ಸಣಬು, ಹೊಲಿಗೆಯ ಯಂತ್ರ, ಚಹ, ಚರ್ಮ ಮೊದಲಾದವುಗಳಿದ್ದವು. ಆಯಾತವು ಮುಖ್ಯವಾಗಿ-ತಯಾರಿಕೆ ವಸ್ತುಗಳು, ಮೋಟಾರು, ಬಟ್ಟೆಗಳು, ಚರ್ಮದ ಸಾಮಾನುಗಳು, ಹೊಲಿಗೆಯ ಯಂತ್ರಗಳು, ಸೈಕಲ್ಲುಗಳು, ಔಷಧಿಗಳು, ರಾಸಾಯನಿಕ ವಸ್ತುಗಳು ಮೊದಲಾದವುಗಳನ್ನೊಳಗೊಂಡಿತ್ತು. ಭಾರತದ ನಿರ್ಯಾತದಲ್ಲಿ ಪ್ರತಿಶತ ೭೧ ರಷ್ಟು ಒಕ್ಕಲುತನ ಸರಕುಗಳಿದ್ದವು ಹಾಗೂ ಆಯಾತದಲ್ಲಿ ಪ್ರತಿಶತ ೬೪ರಷ್ಟು ತಯಾರಿಕೆ ಸರಕುಗಳಿದ್ದವು.

ಒಂದು ಮುಖ್ಯ ಲಕ್ಷಣವೆಂದರೆ ಭಾರತಕ್ಕೆ ವ್ಯಾಪಾರದ ನಿಲುವು ಅನುಕೂಲವಾಗಿತ್ತು. (Favourable Balance of Trade) ಭಾರತದ ಪರದೇಶ ವ್ಯಾಪಾರದ ರಚನೆ, ನಿರ್ದೇಶನ ಹಾಗೂ ಗಾತ್ರದಲ್ಲಿ ಮಹತ್ವದ ಬದಲಾವಣೆಗಳಾದವು. ಜಪಾನ, ಜರ್ಮನಿ ಮತ್ತು ಇನ್ನಿತರ ಯುದ್ಧಕಾಲದ ವಿರೋಧಿ ರಾಷ್ಟ್ರಗಳೊಡನೆ ಈ ಅವಧಿಯಲ್ಲಿ ವ್ಯಾಪಾರ ಸ್ಥಗಿತವಾಯಿತು ಮತ್ತು ತಯಾರಿಕೆ ವಸ್ತುಗಳ ನಿರ್ಯಾತದಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಯಿತು.

ಯುದ್ಧದ ನಂತರ ದುರಸ್ತಿ ಮತ್ತು ಸ್ಥಿತ್ಯಂತರ ಹಾಗೂ ಬಳಕೆದಾರರ ವಸ್ತುಗಳ ಸ್ಥಗಿತಗೊಂಡ ಬೇಡಿಕೆಯನ್ನು ಪೂರೈಸಲು ಸರಕಾರವು ಮುಕ್ತ ಧೋರಣೆ (Liberal policy) ಯನ್ನು ಅನುಸರಿಸಿತು. ಹಿಂದುಸ್ತಾನವು ಭಾರತ ಹಾಗೂ ಪಾಕಿಸ್ತಾನಗಳಾಗಿ ಇಬ್ಭಾಗವಾಯಿತು ಕಚ್ಚಾ ಸರಕುಗಳಾದ ಸಣಬು, ಹತ್ತಿ ಮತ್ತು ಆಹಾರ ಧಾನ್ಯ ಮುಂತಾದವುಗಳನ್ನು ಆಯಾತ ಮಾಡಿಕೊಳ್ಳಬೇಕಾಯಿತು.

ಒಟ್ಟಿನ ಮೇಲೆ ಬ್ರಿಟಿಷ್ ಸರಕಾರದ ಮುಲತಾಯಿ ಧೋರಣೆ ಹಾಗೂ ಬ್ರಿಟನ್‌ದಲ್ಲಿಯ ಔದ್ಯೋಗಿಕ ಕ್ರಾಂತಿಯ ಫಲವಾಗಿ ಭಾರತೀಯ ಕೈಗಾರಿಕೆಗಳು ಕುಸಿದವು ಮತ್ತು ಭಾರತವು ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿಯಿತು. ಆದ ಕಾರಣ ಸ್ವಾತಂತ್ರ್ಯಪೂರ್ವದಲ್ಲಿ ಭಾರತದ ಪರದೇಶ ವ್ಯಾಪಾರದ ಪ್ರಮುಖ ಧೋರಣೆಯೆಂದರೆ ಕಚ್ಚಾ ಸರಕುಗಳನ್ನು ನಿರ್ಯಾತ

ಮಾಡುವುದು ಮತ್ತು ತಯಾರಿಕೆ ವಸ್ತುಗಳನ್ನು ಆಯಾತ ಮಾಡಿಕೊಳ್ಳುವದಾಗಿತ್ತು. ಆದರೆ ಸ್ವಾತಂತ್ರ್ಯದ ಅನಂತರ ಭಾರತದ ಪರದೇಶ ವ್ಯಾಪಾರದ ಗಾತ್ರ, ರಚನೆ, ಗುರಿ ಮತ್ತು ನಿರ್ದೇಶನಗಳಲ್ಲಿ ಮಹತ್ವದ ಬದಲಾವಣೆಗಳಾಗಿವೆ.

೨) ಸ್ವಾತಂತ್ರ್ಯಾನಂತರದ ಪರದೇಶ ವ್ಯಾಪಾರ :

ಸ್ವಾತಂತ್ರ್ಯದ ಅನಂತರ ಯೋಜನಾವಧಿಯ ಪೂರ್ವದಲ್ಲಿ, ಭಾರತದ ಪರದೇಶ ವ್ಯಾಪಾರದಲ್ಲಿ ಆಯಾತ ಪ್ರಮಾಣವು ನಿರ್ಯಾತಕ್ಕಿಂತ ಹೆಚ್ಚಿಗಿದ್ದಿತು. ೧೯೫೦-೫೧ ರಲ್ಲಿ, ಭಾರತದ ಆರ್ಥಿಕ ಅಭಿವೃದ್ಧಿಗೋಸ್ಕರ, ಸರಕಾರವು ಪಂಚವಾರ್ಷಿಕ ಯೋಜನೆಗಳನ್ನು ಪ್ರಾರಂಭಿಸಿತು. ಪಂಚವಾರ್ಷಿಕ ಯೋಜನಾವಧಿಯಲ್ಲಿಯ ಭಾರತದೇಶದ ಪರದೇಶ ವ್ಯಾಪಾರವನ್ನು ಈ ಕೆಳಗಿನಂತೆ ಅಭ್ಯಸಿಸಬಹುದು.

(ಅ) ಭಾರತದ ಪರದೇಶ ವ್ಯಾಪಾರದ ಗಾತ್ರ :

ಮೊದಲನೆಯ ಪಂಚವಾರ್ಷಿಕ ಯೋಜನೆ (೧೯೫೦-೫೧ರಿಂದ ೧೯೫೫-೫೬) ಈ ಅವಧಿಯಲ್ಲಿ ಆಯಾತದ ಪ್ರಮಾಣವು ಹೆಚ್ಚಾಯಿತು. ವ್ಯಾಪಾರದ ಗಾತ್ರವನ್ನು ಈ ಕೆಳಗಿನ ಅಂಕೆ ಸಂಖ್ಯೆಗಳಿಂದ ತಿಳಿಯಬಹುದು :—

ವರ್ಷ	ಆಯಾತ	ನಿರ್ಯಾತ	ವ್ಯಾಪಾರ ನಿಲುವು
	(ಕೋಟಿ ರೂಪಾಯಿಗಳಲ್ಲಿ)		
೧೯೫೦–೫೧	೬೫೦.೩	೬೪೬.೮	–೩.೫
೧೯೫೧–೫೨	೯೬೨.೯	೭೩೦.೧	–೨೩೨.೮
೧೯೫೨–೫೩	೬೩೩.೦	೬೦೧.೯	–೩೧.೧
೧೯೫೩–೫೪	೫೯೧.೮	೫೩೯.೭	–೫೨.೧
೧೯೫೪–೫೫	೬೮೯.೭	೫೯೬.೬	–೯೩.೧
ಒಟ್ಟು....	೩೬೫೦.೫	೩೧೦೮.೬	೫೪೧.೯
ವಾರ್ಷಿಕ ಸರಾಸರಿ	೭೩೦.೦	೬೨೨.೦	೧೦೮.೦

(ಮೂಲ: ರಿಝರ್ವ ಬ್ಯಾಂಕ್ ಆಫ್ ಇಂಡಿಯಾ ಬುಲೆಟಿನ್)

ಮೇಲಿನ ಅಂಕಿ ಸಂಖ್ಯೆಗಳ ಆಧಾರದಿಂದ ತಿಳಿಯುವದೇನೆಂದರೆ, ವಾರ್ಷಿಕ ಸರಾಸರಿ ವ್ಯಾಪಾರದ ಕೊರತೆ ೧೦೮ ಕೋಟಿ ರೂಪಾಯಿಗಳಷ್ಟಿತ್ತು. ೫ ವರ್ಷಗಳ ಅವಧಿಯಲ್ಲಿ ಒಟ್ಟು ಕೊರತೆ ೫೪೨ ಕೋಟಿ ರೂಪಾಯಿಗಳಷ್ಟಿತ್ತು. ಈ ವ್ಯಾಪಾರದ ನಿಲುವಿನಲ್ಲಿಯ ಅನನುಕೂಲತೆ ಮುಖ್ಯವಾಗಿ ಔದ್ಯೋಗಿಕರಣದ ಫಲವಾಗಿ ಯಾಂತ್ರಿಕ ವಸ್ತುಗಳ

ನಿರ್ಯಾತದಿಂದಾಯಿತು. ೯೫೫ ಕೋಟಿ ರೂಪಾಯಿಗಳ ಮೊತ್ತದ ಆಹಾರ ವಸ್ತುಗಳನ್ನು ಕೂಡ ಈ ಅವಧಿಯಲ್ಲಿ ಆಯಾತ ಮಾಡಿಕೊಳ್ಳಲಾಯಿತು. ನಿರ್ಯಾತದ ಪ್ರಮಾಣ ದಲ್ಲಿ ಯಾವದೇ ಮಹತ್ವದ ಬದಲಾವಣೆಯಾಗಲಿಲ್ಲ.

ಎರಡನೆಯ ಪಂಚವಾರ್ಷಿಕ ಯೋಜನೆ: ಎರಡ ನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಭಾರಿ ಪ್ರಮಾಣದ ಔದ್ಯೋಗೀಕರಣವನ್ನು ಪ್ರಾರಂಭ ಮಾಡ ಲಾಯಿತು. ಉಕ್ಕು ಮತ್ತು ಕಬ್ಬಿಣ ಉದ್ದಿಮೆ, ರೇಲ್ವೆಗಳ ನವೀಕರಣ ಮುಂತಾದವುಗಳನ್ನು ಕೈಕೊಂಡುದಕ್ಕಾಗಿ ಆಯಾತ ಪ್ರಮಾಣವು ಭಾರಿ ದೊಡ್ಡ ಮಟ್ಟವನ್ನು ಮುಟ್ಟಿತು. ಇದಲ್ಲದೆ, ಆಹಾರ ವಸ್ತುಗಳ ಹಾಗೂ ಸಂರಕ್ಷಕ ವಸ್ತುಗಳ ಆಯಾತವನ್ನು ಮಾಡಿಕೊಳ್ಳಲಾಯಿತು. ಆಹಾರ ವಸ್ತುಗಳ ಆಯಾತ ೬೦೫ ಕೋಟಿ ರೂಪಾಯಿಗಳಷ್ಟಿತ್ತು. ವಾರ್ಷಿಕ ಸರಾಸರಿ ನಿರ್ಯಾತ ವ್ಯಾಪಾರವು ೬೧೩ ಕೋಟಿ ರೂಪಾಯಿ ಗಳಷ್ಟಿತ್ತು. ಈ ಸರಾಸರಿ ನಿರ್ಯಾತ ವ್ಯಾಪಾರವು ಮೊದಲ ನೆಯ ಪಂಚವಾರ್ಷಿಕ ಯೋಜನೆಗಿಂತ ಕಡಿಮೆಯಾಗಿತ್ತು. ಇದರಿಂದ ಕಂಡುಬರುವದೇನೆಂದರೆ ಈ ಅವಧಿಯಲ್ಲಿ ನಿರ್ಯಾತ ವ್ಯಾಪಾರದ ಅಭಿವೃದ್ಧಿಗೆ ಅಷ್ಟೊಂದು ಗಮನವನ್ನು ಕೊಟ್ಟಿ ದ್ದಿಲ್ಲ. ಇದರಿಂದ ವ್ಯಾಪಾರದ ನಿಲುವು ಬಹುಪ್ರಮಾಣದಲ್ಲಿ ಅನನುಕೂಲವಾಗಿದ್ದಿತು. ಇದನ್ನು ಕೆಳಗಿನ ಅಂಕಿ ಅಂಶ ಗಳಿಂದ ಕಾಣಬಹುದು.

ವರ್ಷ	ಆಯಾತ	ನಿರ್ಯಾತ	ವ್ಯಾಪಾರದ ನಿಲುವು
	(ಕೋಟಿ ರೂ. ಗಳಲ್ಲಿ)		
೧೯೫೬–೫೭	೧೧೦೨.೧	೬೩೫.೨	—೪೬೬.೯
೧೯೫೭–೫೮	೧೨೩೩.೨	೫೯೪.೨	—೬೩೯.೦
೧೯೫೮–೫೯	೧೦೨೯.೩	೫೭೬.೩	—೪೫೩.೦
೧೯೫೯–೬೦	೯೩೨.೩	೬೨೭.೪	—೩೦೪.೯
೧೯೬೦–೬೧	೧೧೦೫.೭	೬೩೦.೫	—೪೭೫.೨
ಒಟ್ಟು	೫೪೦೨.೬	೩೦೬೩.೬	—೨೩೩೯.೦
ವಾರ್ಷಿಕ ಸರಾಸರಿ	೧೦೮೦.೦	೬೧೩.೦	—೪೬೭.೦

ಈ ರೀತಿ ಎರಡನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ, ವ್ಯಾಪಾರದ ನಿಲುವು ೪೬೭ ಕೋಟಿ ರೂಪಾಯಿಗಳಷ್ಟು ಅನನುಕೂಲವಾಗಿತ್ತು. ಇದನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯ ವ್ಯಾಪಾರಿ ನಿಲುವಿನಲ್ಲಿಯ ಅನನುಕೂಲತೆಯೊಂದಿಗೆ ಹೋಲಿಸಿ ನೋಡಿದಾಗ, ಭಾರತದ ಪರದೇಶ ವ್ಯಾಪಾರದ ಅನಿಶ್ಚಿತ ಪರಿಸ್ಥಿತಿ ಕಂಡುಬರುತ್ತದೆ.

ಮೂರನೆಯ ಪಂಚವಾರ್ಷಿಕ ಯೋಜನೆ : ಯೋಜನಾ ಆಯೋಗವು ಮೂರನೆಯ ಪಂಚವಾರ್ಷಿಕ

ಯೋಜನೆಯ ಅವಧಿಯಲ್ಲಿ ೩೭೦೦ ಕೋಟಿ ರೂಪಾಯಿಗಳ ನಿರ್ಯಾತ ವ್ಯಾಪಾರ ಹಾಗೂ ೫೭೫೦ ಕೋಟಿ ರೂಪಾಯಿಗಳ ಮೊತ್ತದ ಆಯಾತವನ್ನು ಯೋಜಿಸಿತ್ತು. ಈ ಅವಧಿಯಲ್ಲಿಯ ಪರದೇಶ ವ್ಯಾಪಾರದ ಗಾತ್ರವು ಈ ಕೆಳಗಿನಂತೆ ಇತ್ತು :

(ಕೋಟಿ ರೂಪಾಯಿಗಳಲ್ಲಿ)

ವರ್ಷ	ಆಯಾತ	ನಿರ್ಯಾತ	ವ್ಯಾಪಾರದ ನಿಲುವು
೧೯೬೧–೬೨	೧೦೦೬.೦	೬೬೮.೩	—೩೩೭.೭
೧೯೬೨–೬೩	೧೦೯೬.೮	೬೮೦.೯	—೪೧೫.೯
೧೯೬೩–೬೪	೧೨೪೫.೦	೮೦೧.೬	—೪೪೩.೪
೧೯೬೪–೬೫	೧೪೨೦.೮	೮೦೦.೯	—೬೧೯.೯
೧೯೬೫–೬೬	೧೩೫೦.೦	೭೮೩.೩	—೫೬೬.೭
ಒಟ್ಟು	೬೧೧೮.೬	೩೭೩೫.೦	—೨೩೮೩.೬
ವಾರ್ಷಿಕ ಸರಾಸರಿ	೧೨೨೪.೦	೭೪೭.೦	—೪೭೭.೦

ಮೇಲಿನ ಅಂಕಿ ಅಂಶಗಳಿಂದ ತಿಳಿದುಬರುವದೇನೆಂದರೆ, ನಿರ್ಯಾತ ಪ್ರಮಾಣದಲ್ಲಿ ಯೋಜನೆಯ ಗುರಿಯನ್ನು ಸಾಧಿಸಲಾಯಿತು. ಆದರೆ, ಆಯಾತ ಪ್ರಮಾಣ ಗುರಿಗಿಂತ ಹೆಚ್ಚಾಗಿದ್ದಿತು. ದೇಶದ ಅಭಿವೃದ್ಧಿ ಕಾರ್ಯಕ್ರಮಗಳ ಅವಶ್ಯ

ಕತೆಗಳನ್ನು ಪೂರೈಸಲು, ಭಾರತವು ಹೆಚ್ಚಿನ ಪ್ರಮಾಣದ ಆಯಾತವನ್ನು ಮಾಡಿಕೊಳ್ಳಬೇಕಾಯಿತು. ಒಟ್ಟು ಆಯಾತದ ಮೊತ್ತ ೬೧೧೮ ಕೋಟಿ ರೂಪಾಯಿಗಳಷ್ಟಿತ್ತು. ೧೯೬೨ ರಲ್ಲಿ ಚೀನಿಯರ ಆಕ್ರಮಣ ಹಾಗೂ ೧೯೬೫ ರಲ್ಲಿ ಪಾಕಿಸ್ತಾನದೊಡನೆ ಯುದ್ಧ ಮುಂತಾದ ಕಾರಣಗಳಿಂದಾಗಿ, ಮೂರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ, ಭಾರತದ ಸಂರಕ್ಷಣಾ ವಸ್ತುಗಳ ಹಾಗೂ ಆಹಾರ ಸಾಮಗ್ರಿಗಳ ಅವಶ್ಯಕತೆ ಹೆಚ್ಚಾಯಿತು. ಇವನ್ನು ಪೂರೈಸಲು ದೇಶವು ಭಾರಿ ಪ್ರಮಾಣದಲ್ಲಿ ಆಯಾತ ಮಾಡಿಕೊಂಡಿತು.

ರೂಪಾಯಿ ಮೌಲ್ಯವಿಚ್ಛೇದನ ಅನಂತರದ ವರ್ಷಗಳಲ್ಲಿ ಭಾರತದ ಪರದೇಶ ವ್ಯಾಪಾರ : ಜೂನ್ ೧೯೬೬ ರಲ್ಲಿ ಭಾರತವು ರೂಪಾಯಿಯನ್ನು ಶೇಕಡ ೩೬.೫ ರಷ್ಟು ಮೌಲ್ಯ ವಿಚ್ಛೇದನ ಮಾಡಿತು. ಆದರೆ ಆ ವರ್ಷದಲ್ಲಿ ದೇಶದಲ್ಲಿ ಬರಗಾಲ ಹಾಗೂ ಔದ್ಯೋಗಿಕ ಅಶಾಂತಿ ತಲೆದೋರಿತು. ೧೯೬೬–೬೭ ಹಾಗೂ ೧೯೬೭–೬೮ ರಲ್ಲಿ ನಿರ್ಯಾತ ವ್ಯಾಪಾರ ಹೆಚ್ಚಿದರೂ ಕೂಡ, ೧೯೬೬–೬೭ ರಲ್ಲಿ ಆಯಾತ ಪ್ರಮಾಣ ೨೦೭೮ ಕೋಟಿ ರೂಪಾಯಿಗಳ ಅತಿ ಹೆಚ್ಚಿನ ಮಟ್ಟವನ್ನು ಮುಟ್ಟಿತು. ಇದರಿಂದಾಗಿ ವ್ಯಾಪಾರದ ನಿಲುವು ಬಹು ಅನನುಕೂಲವಾಯಿತು. ಆದಾಗ್ಯೂ ಮೌಲ್ಯ ವಿಚ್ಛೇದನೆಯು ನಿರ್ಯಾತ ವ್ಯಾಪಾರ ಅಭಿವೃದ್ಧಿಯಲ್ಲಿ ಬಹಳ ಸಹಾಯ ಮಾಡಿತು. ೧೯೬೬–೬೭ ರ ನಂತರದ ವ್ಯಾಪಾರವನ್ನು ಈ ಕೆಳಗಿನ ಅಂಕಿ ಅಂಶಗಳಿಂದ ಅಭ್ಯಸಿಸಬಹುದು.

(ಕೋಟಿ ರೂ. ಗಳಲ್ಲಿ).

ವರ್ಷ	ಆಯಾತ	ನಿರ್ಯಾತ	ವ್ಯಾಪಾರದ ನಿಲುವು
೧೯೬೬–೬೭	೨೦೭೮	೧೧೫೭	–೯೨೧
೧೯೬೭–೬೮	೨೦೦೭	೧೧೯೯	–೮೦೮
೧೯೬೮–೬೯	೧೯೦೯	೧೩೫೮	–೫೫೧
೧೯೬೯–೭೦	೧೫೬೭	೧೪೧೩	–೧೫೪
೧೯೭೦–೭೧	೧೬೨೫	೧೫೩೫	– ೯೦
೧೯೭೧–೭೨	೧೮೫೩	೧೫೬೭	–೨೮೬

ಈ ರೀತಿ ಇತ್ತೀಚಿನ ವರ್ಷಗಳಲ್ಲಿ ನಿರ್ಯಾತ ವ್ಯಾಪಾರ ಅಭಿವೃದ್ಧಿಗೆ ಭಾರಿ ಪ್ರೋತ್ಸಾಹ ಸಿಕ್ಕಿದ್ದರಿಂದ ಮತ್ತು ಆಯಾತದ ಪ್ರಮಾಣ ಕಡಿಮೆಯಾಗುತ್ತ ಬಂದಿರುವುದರಿಂದ ವ್ಯಾಪಾರದ ನಿಲುವಿನಲ್ಲಿಯ ಅನನುಕೂಲತೆಯು ಕಡಿಮೆಯಾಗುತ್ತಿದೆ.

(ಬ) ಭಾರತದ ಪರದೇಶ ವ್ಯಾಪಾರದ ರಚನೆ : ಭಾರತದ ಪರದೇಶ ವ್ಯಾಪಾರದ ರಚನೆಯನ್ನು ಆಯಾತ ಹಾಗೂ ನಿರ್ಯಾತ ಈ ಎರಡು ವಿಭಾಗಗಳಲ್ಲಿ ಅಭ್ಯಸಿಸಬಹುದು.

ಆಯಾತ ವ್ಯಾಪಾರ ರಚನೆ : ಭಾರತವು ಆಯಾತ ಮಾಡಿಕೊಳ್ಳುವ ವಸ್ತುಗಳನ್ನು ಮುಖ್ಯವಾಗಿ ನಾಲ್ಕು ವಿಧ

ಗಳಲ್ಲಿ ವಿಂಗಡಿಸಬಹುದು: (೧) ಯಂತ್ರೋಪಕರಣಗಳು; (೨) ಕಚ್ಚಾ ಸರಕುಗಳು; (೩) ಬಳಕೆಯ ವಸ್ತುಗಳು; ಮತ್ತು (೪) ಆಹಾರ ವಸ್ತುಗಳು.

ವಿವಿಧ ಯಂತ್ರ, ಸಾಮಗ್ರಿಗಳು, ಸಾರಿಗೆ ಸಂಪರ್ಕ ವಸ್ತುಗಳು, ಉಕ್ಕು–ಕಬ್ಬಿಣ ಮುಂತಾದವುಗಳು ಯಂತ್ರೋಪಕರಣಗಳ ವಿಭಾಗದಲ್ಲಿ ಬರುತ್ತವೆ; ಖನಿಜಗಳು, ಕಚ್ಚಾ ಸಣಬು, ಹತ್ತಿ, ಲೋಹ ಪದಾರ್ಥಗಳು, ರಾಸಾಯನಿಕ ವಸ್ತುಗಳು ಮುಂತಾದವುಗಳು ಕಚ್ಚಾ ಸರಕುಗಳು; ವಿದ್ಯುತ್ ಉಪಕರಣಗಳು, ಔಷಧಿಗಳು, ರೇಯಾನ್ ಬಟ್ಟೆ ಮುಂತಾದವು ಬಳಕೆಯ ವಸ್ತುಗಳು. ಮೂರನೆಯ ಪಂಚವಾರ್ಷಿಕ ಯೋಜನೆಯ ವರೆಗೆ ಈ ಎಲ್ಲ ವಸ್ತುಗಳ ಆಯಾತ ಪ್ರಮಾಣವನ್ನು ಕೆಳಗಿನ ಅಂಕಿ ಸಂಖ್ಯೆಗಳಿಂದ ಅಭ್ಯಸಿಸಬಹುದು :—

ಆಯಾತ ವಸ್ತುಗಳ ರಚನೆ

	ಮೊದಲನೆಯ ಯೋಜನೆ ೧೯೫೧–೫೨ ರಿಂದ ೧೯೫೫–೫೬ %	ಎರಡನೆಯ ಯೋಜನೆ ೧೯೫೫–೫೬ ರಿಂದ ೧೯೬೦–೬೧ %	ಮೂರನೆಯ ಯೋಜನೆ ೧೯೬೧–೬೨ ರಿಂದ ೧೯೬೫–೬೬ %
(೧) ಯಂತ್ರೋಪಕರಣಗಳು	೨೮.೮	೪೨.೨	೪೭.೮
(೨) ಕಚ್ಚಾ ಸರಕುಗಳು	೨೭.೫	೧೭.೭	೧೭.೦
(೩) ಬಳಕೆಯ ವಸ್ತುಗಳು	೨೪.೦	೧೯.೮	೧೫.೪
(೪) ಆಹಾರ ಸಾಮಗ್ರಿಗಳು	೧೬.೩	೧೪.೯	೧೯.೮

ಔದ್ಯೋಗಿಕ ಅಭಿವೃದ್ಧಿಗೋಸ್ಕರ ಯಂತ್ರೋಪಕರಣಗಳನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಲಾಗಿದೆ. ಯೋಜನಾವಧಿಯ ಮೊದಲನೆಯ ದಶಕದಲ್ಲಿ ಔದ್ಯಮಿಕ ವಸ್ತುಗಳ (ಯಂತ್ರೋಪಕರಣ ಹಾಗೂ ಕಚ್ಚಾ ಸರಕುಗಳು) ಆಯಾತ ಪ್ರಮಾಣ ಒಟ್ಟು ಆಯಾತದ ೫೫% ದಿಂದ ೬೦% ದ ನಡುವೆ ಇತ್ತು. ಆಹಾರ ವಸ್ತುಗಳ ಆಯಾತ ವ್ಯಾಪಾರವು ಹೆಚ್ಚುಕಡಿಮೆ ಒಟ್ಟು ೧೫% ದಷ್ಟು ಇತ್ತು. ಗ್ರಾಹಕರ ವಸ್ತುಗಳ ಆಯಾತ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಮೂರನೆಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಯಂತ್ರಸಾಮಗ್ರಿಗಳ ಆಯಾತ ಹೆಚ್ಚಿದಂತೆ, ಆಹಾರ ಪದಾರ್ಥಗಳ ಆಯಾತ ಪ್ರಮಾಣದಲ್ಲಿಯೂ ಏರಿಕೆ ಕಂಡು ಬರುತ್ತದೆ.

ನಿರ್ಯಾತ ವ್ಯಾಪಾರ ರಚನೆ: ಜಗತ್ತಿನ ಒಟ್ಟು ನಿರ್ಯಾತ ವ್ಯಾಪಾರದಲ್ಲಿ, ಭಾರತದ ಭಾಗ ಸದಾ ಇಳಿಮುಖವಾಗುತ್ತ ಬಂದಿದೆ. ೧೯೫೫ ರಲ್ಲಿ ೧.೫% ದಷ್ಟು ಇದ್ದದ್ದು ೧೯೭೦ ರಲ್ಲಿ ೦.೬% ಕ್ಕೆ ಇಳಿಯಿತು. ಸ್ವಾತಂತ್ರ್ಯಾನಂತರದ ಮೊದಲಿನ ವರ್ಷಗಳಲ್ಲಿ ಚಹ, ನೂಲು, ಚರ್ಮ ವಸ್ತುಗಳು, ಸೆಣಬು, ವನಸ್ಪತಿ ಎಣ್ಣೆಗಳು, ತಂಬಾಕು ಮುಂತಾದ ವಸ್ತುಗಳನ್ನು ಭಾರತವು ನಿರ್ಯಾತ ಮಾಡುತ್ತಿತ್ತು. ಆದರೆ ಯೋಜನಾವಧಿಯಲ್ಲಿ ಹೊಸ ಹೊಸ ವಸ್ತುಗಳನ್ನು ನಿರ್ಯಾತ ಮಾಡಲು ಪ್ರಯತ್ನಮಾಡಲಾಗುತ್ತಿದೆ. ರೇಲ್ವೆ ವ್ಯಾಗೀನು,

ವಿದ್ಯುಚ್ಛಕ್ತಿ ಸಲಕರಣೆಗಳು, ಗಡಿಯಾರಗಳು, ಪೆಟ್ರೋಲಿಯಂ ವಸ್ತುಗಳು, ಸಕ್ಕರೆ, ನೂಲಿನ ಬಟ್ಟೆಗಳು, ಸಣ್ಣ ಯಂತ್ರಗಳು, ಸಕ್ಕರೆ ಮತ್ತು ಸಿಮೆಂಟ ಉದ್ದಿಮೆ ಯಂತ್ರಗಳು ಮುಂತಾದವುಗಳನ್ನು ಹೊಸದಾಗಿ ನಿರ್ಯಾತ ಮಾಡಲಾಗುತ್ತಿದೆ. ಇದರಿಂದ ಸಾಂಪ್ರದಾಯಿಕ ವಸ್ತುಗಳ ನಿರ್ಯಾತ ವ್ಯಾಪಾರ ಪ್ರಮಾಣ ಕಡಿಮೆಯಾಗುತ್ತ ಬಂದಿದ್ದು ಹೊಸ ಹೊಸ ವಸ್ತುಗಳ ನಿರ್ಯಾತ ವ್ಯಾಪಾರ ಹೆಚ್ಚಿದೆ. ಇಳಿಮುಖವಾಗುತ್ತಿರುವ ಸಾಂಪ್ರದಾಯಿಕ ವಸ್ತುಗಳ ನಿರ್ಯಾತ ವ್ಯಾಪಾರವನ್ನು ಈ ಕೆಳಗಿನ ಪಟ್ಟಿಯಿಂದ ತಿಳಿಯಬಹುದು.

ಒಟ್ಟು ನಿರ್ಯಾತ ವ್ಯಾಪಾರದಲ್ಲಿ ಸಾಂಪ್ರದಾಯಿಕ ವಸ್ತುಗಳ ನಿರ್ಯಾತ ವ್ಯಾಪಾರದ ಭಾಗ

ವರ್ಷಗಳು	ಭಾಗ
೧೯೫೧—೫೬	೭೦%
೧೯೫೬—೬೧	೬೨%
೧೯೬೧—೬೬	೫೬%
೧೯೬೯—೭೧	೫೦%
೧೯೭೩—೭೪	೪೦%—ನಿಯೋಜಿತ

(ಕ) ಪರದೇಶ ವ್ಯಾಪಾರದ ನಿರ್ದೇಶನ : ಭಾರತದ ಪರದೇಶ ವ್ಯಾಪಾರದ ಭೌಗೋಲಿಕ ನಿರ್ದೇಶನವನ್ನು ಅಭ್ಯಸಿಸಲು, ಜಗತ್ತಿನ ವಿವಿಧ ದೇಶಗಳನ್ನು ೪ ವಿಭಾಗಗಳಲ್ಲಿ

ವಿಂಗಡಿಸಿ, ಆಯಾ ವಿಭಾಗದ ದೇಶಗಳ ಜೊತೆಗಿನ ವ್ಯಾಪಾರವನ್ನು ಅಭ್ಯಸಿಸಬಹುದು.

೧) ಪೌಂಡು ಸ್ಟರ್ಲಿಂಗ ವಿಭಾಗ

೨) ಡಾಲರ ವಿಭಾಗ

೩) ಯುರೋಪದ ಆರ್ಥಿಕ ಸಹಕಾರ ಸಂಘದ ರಾಷ್ಟ್ರಗಳು: ಆಸ್ಟ್ರಿಯಾ, ಬೆಲ್ಜಿಯಮ್, ಡೆನ್ಮಾರ್ಕ, ಪಶ್ಚಿಮ ಜರ್ಮನಿ, ಫ್ರಾನ್ಸ್, ಇಟಲಿ, ಬ್ರಿಟನ್, ಲಗ್ಝೆಂಬರ್ಗ, ನೆದರ್ ಲ್ಯಾಂಡ್ಸ್, ನಾರ್ವೆ, ಪೋರ್ಚುಗಾಲ, ಸ್ವೀಡನ್, ಸ್ವಿಟ್ಝರ್ಲಂಡ್, ಟರ್ಕಿ, ಸ್ಪೇನ್ ಮುಂತಾದವುಗಳು.

೪) ಇತರ ರಾಷ್ಟ್ರಗಳು: ಈ ವಿಭಾಗದಲ್ಲಿ ಸೋವಿಯಟ್ ರಶಿಯಾ, ಪೋಲಂಡ, ರುಮೇನಿಯಾ, ಬಲ್ಗೇರಿಯಾ, ಹಂಗೇರಿ, ಪೂರ್ವ ಜರ್ಮನಿ, ಝೆಕೋಸ್ಲೋವಾಕಿಯಾ, ಯುಗೊಸ್ಲೋವಿಯಾ ಮುಂತಾದ ರಾಷ್ಟ್ರಗಳು ಬರುತ್ತವೆ.

ಮೇಲೆ ಹೇಳಿದ ನಾಲ್ಕು ವಿಭಾಗಗಳ ಜೊತೆಗಿನ ಒಟ್ಟು ವ್ಯಾಪಾರದ ಶೇಕಡಾವಾರು ಪ್ರಮಾಣವನ್ನು ಆಯಾತ ಮತ್ತು ನಿರ್ಯಾತ ಈ ಎರಡು ದಿಶೆಗಳಲ್ಲಿ ಕೆಳಗಿನ ಪಟ್ಟಿಯಿಂದ ತಿಳಿಯಬಹುದು:

ಭಾರತದ ಪರದೇಶ ವ್ಯಾಪಾರದಲ್ಲಿ ವಿವಿಧ ಭಾಗಗಳ ಶೇಕಡಾವಾರು ಪ್ರಮಾಣ.

	ಮೊದಲನೆ ಯೋಜನೆ ೫೧–೫೬	ಎರಡನೆ ಯೋಜನೆ ೫೬–೬೧	ಮೂರನೆ ಯೋಜನೆ ೬೧-೬೬	೧೯೬೬.೬೭ ರಿಂದ ೧೯೬೮-೬೯
ಅ) ನಿರ್ಯಾತ ವ್ಯಾಪಾರ :				
೧) ಸ್ಟರ್ಲಿಂಗ ವಿಭಾಗ	೫೪	೫೦	೩೮.೭	೩೦.೪
೨) ಡಾಲರ ವಿಭಾಗ	೨೧	೧೯	೨೧.೨	೨೦.೬
೩) ಯು. ಆ. ಸ. ಸ. ರಾಷ್ಟ್ರಗಳು	೧೦	೦೯	೦೯.೧	೯.೨
೪) ಇತರ ರಾಷ್ಟ್ರಗಳು	೧೫	೨೨	೩೦.೯	೩೯.೮
ಬ) ಆಯಾತ ವ್ಯಾಪಾರ :				
೧) ಸ್ಟರ್ಲಿಂಗ ವಿಭಾಗ	೪೬	೩೮	೨೨.೨	೧೭.೪
೨) ಡಾಲರ ವಿಭಾಗ	೨೪	೨೬	೩೬.೨	೩೮.೩
೩) ಯು. ಆ. ಸ. ಸ. ರಾಷ್ಟ್ರಗಳು	೧೬	೨೧	೧೫.೪	೧೩.೮
೪) ಇತರ ರಾಷ್ಟ್ರಗಳು	೧೪	೧೫	೨೬.೧	೩೦.೫

ಈ ಮೇಲಿನ ಅಂಕಿ ಅಂಶಗಳಿಂದ ಕಂಡು ಬರುವದೇನಂದರೆ, ಸ್ಟರ್ಲಿಂಗ್ ವಿಭಾಗದ ಜೊತೆಗಿನ ನಮ್ಮ ವ್ಯಾಪಾರ. ಆಯಾತ ಮತ್ತು ನಿರ್ಯಾತ ಎರಡೂ ರಂಗಗಳಲ್ಲಿ ಕ್ರಮೇಣ ಇಳಿಮುಖವಾಗುತ್ತ ನಡೆದಿದೆ. ಡಾಲರ ವಿಭಾಗದ ಜೊತೆಗಿನ ನಿರ್ಯಾತ ವ್ಯಾಪಾರ ಹೆಚ್ಚು ಕಡಿಮೆ ಸ್ಥಾಯಿಯಾಗಿದೆ. ಆದರೆ ಈ ವಿಭಾಗದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಪ್ರಮಾಣ ಕ್ರಮೇಣ ಹೆಚ್ಚುತ್ತ ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಡಾಲರ ವಿಭಾಗವು ಒಟ್ಟು ವ್ಯಾಪಾರದಲ್ಲಿ ಪ್ರಮುಖ ಸ್ಥಾನ ಹೊಂದಿದೆ. ಯುರೋಪದ ಆರ್ಥಿಕ ಸಹಕಾರ ಸಂಘದ ರಾಷ್ಟ್ರಗಳೊಂದಿಗಿನ ನಿರ್ಯಾತ ವ್ಯಾಪಾರ ೧೭ ವರ್ಷಗಳ ಅವಧಿಯಲ್ಲಿ ಶೇಕಡ ೯ರಿಂದ ೧೦ ರ ನಡುವೆ ಉಳಿದಿದೆ, ಆಯಾತ ವ್ಯಾಪಾರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಇಳಿಮುಖವಾಗಿದೆ. ಇತರ ರಾಷ್ಟ್ರಗಳ ಜೊತೆಗಿನ ವ್ಯಾಪಾರ, ಎರಡೂ ರಂಗಗಳಲ್ಲಿ ಅಭಿವೃದ್ಧಿಯಾಗಿದೆ. ಈ ವಿಭಾಗಕ್ಕೆ ನಿರ್ಯಾ ಮಾಡುವುದು ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಶೇಕಡ ೧೫ ರಷ್ಟಿದ್ದುದು ೧೯೬೮–೬೯ ರ ವರೆಗೆ ೩೯.೮% ಕ್ಕೆ ಹೆಚ್ಚಿದೆ. ಆಯಾತ ಮಾಡಿಕೊಳ್ಳುವ ಪ್ರಮಾಣವು ಕೂಡ ಮೊದಲನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿದ್ದ ೧೪% ದಿಂದ ೧೯೬೮–೬೯ ರಲ್ಲಿ ೩೦.೫% ದ ವರೆಗೆ ಹೆಚ್ಚಿದೆ.

ಕೆಲವು ಪ್ರಮುಖ ರಾಷ್ಟ್ರಗಳ ಜೊತೆಗಿನ ಪರದೇಶ ವ್ಯಾಪಾರ ಪ್ರಮಾಣವನ್ನು ನಾವು ಈ ಕೆಳಗಿನ ಪಟ್ಟಿಯಿಂದ ಅಭ್ಯಸಿಸಬಹುದು :—

ಆಯಾತ : ಒಟ್ಟು ಆಯಾತದ ಶೇಕಡಾ				ನಿರ್ಯಾತ : ಒಟ್ಟು ನಿರ್ಯಾತದ ಶೇಕಡಾ		
ರಾಷ್ಟ್ರ :	೧೯೫೦–೫೧	೧೯೬೫–೬೬	೧೯೬೮–೬೯	೧೯೫೦–೫೧	೬೫–೬೬	೬೮–೬೯
ಅಮೇರಿಕ	೧೮.೫	೩೮.೦	೩೦.೯	೧೮.೫	೧೮.೬	೧೭.೨
ಇಂಗ್ಲೆಂಡ್	೨೦.೮	೧೦.೪	೬.೯	೨೨.೪	೧೭.೬	೧೪.೮
ಪ. ಜರ್ಮನಿ	೨.೦	೯.೫	೬.೪	೧.೭	೨.೩	೧.೯
ರಶಿಯಾ	೦.೬	೬.೧	೧೦.೦	೦.೨	೧೧.೬	೧೦.೯
ಜಪಾನ	೧.೬	೫.೭	೬.೦	೧.೬	೭.೩	೧೧.೬
ಆಸ್ಟ್ರೇಲಿಯಾ	೫.೨	೧.೮	೧.೪	೪.೮	೨.೨	೧.೯
ಪಾಕಿಸ್ತಾನ	೬.೭	೦.೪	೦.೪	೯.೯	೦.೬	೦.೬

Source : Planning Commission, Basic Statistics relating to Indian economy

ಈ ರೀತಿ ನಮ್ಮ ಪರದೇಶ ವ್ಯಾಪಾರದಲ್ಲಿ ಮೊದಲು ಬ್ರಿಟನ್ ಮಹತ್ವದ ಸ್ಥಾನವನ್ನು ಹೊಂದಿದರೂ, ಈಗ ಅಮೇರಿಕೆಯು ಬಹುಪಾಲು ಹೊಂದಿದೆ. ಇತ್ತೀಚಿನ ವರ್ಷಗಳಲ್ಲಿ ಜಪಾನ ಮತ್ತು ರಶಿಯಾ ದೇಶಗಳ ಜೊತೆಗಿನ ವ್ಯಾಪಾರ ಭಾರಿ ಅಭಿವೃದ್ಧಿ ಹೊಂದಿದೆ. ೧೯೬೯–೭೦ ರಲ್ಲಿ ಒಟ್ಟು ನಿರ್ಯಾತ ವ್ಯಾಪಾರದಲ್ಲಿ, ಬ್ರಿಟನ್ನಿಗೆ ೧೧.೭% ರಷ್ಟು ಹಾಗೂ ಅಮೇರಿಕೆಗೆ ೧೬.೭% ರಷ್ಟು ನಿರ್ಯಾತ ಮಾಡಲಾಗಿದೆ. ಆದರೆ ಅದೇ ವರ್ಷದಲ್ಲಿ, ರಶಿಯಾಕ್ಕೆ ಒಟ್ಟು ನಿರ್ಯಾತ ವ್ಯಾಪಾರದ ೧೩.೫% ರಷ್ಟು, ಹಾಗೂ ಜಪಾನಕ್ಕೆ ೧೩.೬% ರಷ್ಟು ನಿರ್ಯಾತ ಮಾಡಲಾಯಿತು. ಈ ರೀತಿ ೧೯೬೯–೭೦ ರಲ್ಲಿ, ಬ್ರಿಟನ್ನಿನ ಸ್ಥಾನ ಭಾರತದ ನಿರ್ಯಾತ ವ್ಯಾಪಾರದಲ್ಲಿ ೩ ರಿಂದ ೪ ಕ್ಕೆ ಬದಲಾವಣೆಯಾಗಿದೆ. ಪ್ರಥಮ ದ್ವಿತೀಯ ಹಾಗೂ ತೃತೀಯ ಸ್ಥಾನಗಳನ್ನು ಅನುಕ್ರಮವಾಗಿ ಅಮೇರಿಕೆ, ಜಪಾನ ಹಾಗೂ ರಶಿಯಾ ಹೊಂದಿವೆ. ಮುಂಬರುವ ವರ್ಷಗಳಲ್ಲಿ, ಜಪಾನ ಹಾಗೂ ರಶಿಯಾ ದೇಶಗಳ ಜೊತೆಗಿನ ವ್ಯಾಪಾರಕ್ಕೆ ಉಜ್ವಲ ಭವಿತವ್ಯ ಇದೆ.

ಬ್ರಿಟನ್ ಜೊತೆಗಿನ ಭಾರತದ ಆಯಾತ ವ್ಯಾಪಾರವು ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಒಟ್ಟು ಆಯಾತದಲ್ಲಿ ೧೯೫೦–೫೧ ರಲ್ಲಿ ೩೦.೮% ಇದ್ದದ್ದು ೧೯೬೮–೬೯ ರಲ್ಲಿ ೬.೯% ಕ್ಕೆ ಇಳಿದಿದೆ. ಅಮೇರಿಕೆಯಿಂದ ಆಯಾತ ಮಾಡಿಕೊಳ್ಳುತ್ತಿರುವುದು ಕಡಿಮೆಯಾಗುತ್ತಿದ್ದರೂ, ಒಟ್ಟು ಆಯಾತ

ದಲ್ಲಿ, ಅಮೇರಿಕೆಯು ಬಹುಪಾಲು ಹೊಂದಿದೆ. ರಶಿಯಾ, ಕೆನಡಾ, ಜರ್ಮನಿ ಮುಂತಾದವುಗಳು ಆಯಾತ ವ್ಯಾಪಾರದಲ್ಲಿ ಇತರ ಪ್ರಮುಖ ರಾಷ್ಟ್ರಗಳು. ಇತ್ತೀಚಿನ ವರ್ಷಗಳಲ್ಲಿ ರಶಿಯಾದಿಂದ ಆಯಾತ ಮಾಡಿಕೊಂಡ ವಸ್ತುಗಳ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದೆ. ಆಸ್ಟ್ರೇಲಿಯಾ ಹಾಗೂ ಪಾಕಿಸ್ತಾನಗಳ ಜೊತೆಗಿನ ನಮ್ಮ ವ್ಯಾಪಾರ ಇಳಿಮುಖವಾಗುತ್ತಿದೆ.

ಮೊದಲನೆಯ ಪಂಚವಾರ್ಷಿಕ ಯೋಜನೆಯಿಂದ ಇಂದಿನ ವರೆಗೆ ನಿರ್ಯಾತ ವ್ಯಾಪಾರ ಬೆಳೆಯುತ್ತಲೇ ಇದೆ. ಆದರೆ ಆಯಾತ ಪ್ರಮಾಣ ಹೆಚ್ಚಿದ್ದರಿಂದ, ಭಾರತ ಪರದೇಶ ವಿನಿಮಯ ಕೊರತೆಯನ್ನು ಅನುಭವಿಸಬೇಕಾಗಿದೆ. ಭಾರತದ ನಿರ್ಯಾತ ವ್ಯಾಪಾರ ಇನ್ನೂ ಅಷ್ಟೊಂದು ಅಭಿವೃದ್ಧಿಯಾಗಿಲ್ಲ. ಇದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು :—

(೧) ತೀವ್ರ ಗತಿಯಲ್ಲಿ ವೃದ್ಧಿಯಾಗುತ್ತಿರುವ ಜನಸಂಖ್ಯೆ ನಿಯಾ೯ತ ಹೆಚ್ಚಳವನ್ನು (Exportable Surplus) ಕಡಿಮೆ ಮಾಡಿದೆ.

(೨) ಸಾಂಪ್ರದಾಯಿಕ ವಸ್ತುಗಳ ಮೇಲಿನ ಅವಲಂಬನ ಮತ್ತು ಅವುಗಳ ಬೆಳವಣಿಗೆ ಕುಂಠಿತವಾಗಿದೆ.

(೩) ಉತ್ಪಾದನಾ ವೆಚ್ಚ ಹೆಚ್ಚುತ್ತಿರುವುದರಿಂದ, ನಮ್ಮ ವಸ್ತುಗಳಿಗೆ ಪರದೇಶ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗುತ್ತಿದೆ.

(೪) ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆಮದು-ಬದಲಿ (Import Substitution) ಧೋರಣೆಯನ್ನು ಹಳಿದಿವೆ.

ನಿರ್ಯಾತವನ್ನು ಅಭಿವೃದ್ಧಿಗೊಳಿಸಲು, ಭಾರತ ಸರಕಾರವು ಸಾಂಸ್ಥಿಕ, ಆರ್ಥಿಕ ಹಾಗೂ ಇತ್ಯಾದಿ ಉಪಾಯಗಳನ್ನು ಕೈಕೊಂಡಿದೆ.

ಸಾಂಸ್ಥಿಕ ಉಪಾಯಗಳು : (Institutional Measures) ಭಾರತ ಸರಕಾರವು ಈ ವರೆಗೆ ಈ ಕೆಳಗಿನ ಸಂಸ್ಥೆಗಳನ್ನು ಸ್ಥಾಪಿಸಿದೆ.

೧) ವ್ಯಾಪಾರ ಮಂಡಳಿ (Board of Trade) ಈ ಮಂಡಳಿಯು ಮೇ ೧೧, ೧೯೬೨ ರಲ್ಲಿ ಸ್ಥಾಪಿಸಲ್ಪಟ್ಟಿತು. ಇದರ ಮುಖ್ಯ ಉದ್ದೇಶಗಳು ಕೆಳಗಿನಂತೆ ಇರುತ್ತವೆ :—

(ಅ) ಉತ್ಪಾದನೆಯ ಅಭಿವೃದ್ಧಿಗೆ ಸಹಾಯ ಮಾಡುವದು; ಆಂತರಿಕ ಹಾಗೂ ಪರದೇಶ ವ್ಯಾಪಾರ ಅಭಿವೃದ್ಧಿಗೆ ಹೊಂದಿಸುವದು.

(ಬ) ವಸ್ತುಗಳ ಗುಣಮಟ್ಟವನ್ನು ಅಭಿವೃದ್ಧಿ ಪಡಿಸುವದು ಮತ್ತು ಕಾಯ್ದುಕೊಳ್ಳಲು ಪ್ರಯತ್ನಿಸುವದು.

(ಕ) ಸರಕಾರಿ ವ್ಯಾಪಾರವನ್ನು (State Trading) ಕ್ರಿಯಾಶೀಲ ವ್ಯಾಪಾರದ ಪದ್ಧತಿಗೆ ಪ್ರೋತ್ಸಾಹ ಕೊಡುವದರಿಂದ ಹೆಚ್ಚಿಸುವದು.

(ಡ) ಜಾಹಿರಾತು, ಮಾರಾಟಗಾರಿಕೆಯ ಪದ್ಧತಿಯನ್ನು ಸುಧಾರಿಸುವುದು.

೨) ನಿರ್ಯಾತ ವ್ಯಾಪಾರಾಭಿವೃದ್ಧಿಯ ನಿರ್ದೇಶನಾಲಯ (Directorate of Export promotion): ಈ ಸಂಸ್ಥೆಯನ್ನು ಅಗಸ್ಟ ೧೯೫೭ ರಲ್ಲಿ ಸ್ಥಾಪಿಸಲಾಯಿತು. ಇದು ಸರಕಾರಿ ನಿರ್ಯಾತ ಧೋರಣೆಯನ್ನು ಕಾರ್ಯಾಚರಣೆಯಲ್ಲಿ ತರುವ ಅಂಗವಾಗಿದೆ.

೩) ನಿರ್ಯಾತ ವ್ಯಾಪಾರ ಅಭಿವೃದ್ಧಿ ಆಲೋಚನ ಸಭೆಗಳು ಅಥವಾ ಮಂಡಲಗಳು (Export Promotion councils): ಇಂಥ ಕೌನ್ಸಿಲ್‌ಗಳನ್ನು ರಾಸಾಯನಿಕ ವಸ್ತುಗಳು, ನೂಲಿನ ಬಟ್ಟೆಗಳು, ಇಂಜನಿಯರಿಂಗ ವಸ್ತುಗಳು, ಚರ್ಮ, ಪ್ಲಾಸ್ಟಿಕ್ ವಸ್ತುಗಳು, ತಂಬಾಕು ಮುಂತಾದ ಒಟ್ಟು ೧೯ ವಸ್ತುಗಳ ರಫ್ತು ವ್ಯಾಪಾರಾಭಿವೃದ್ಧಿಗಾಗಿ ಪ್ರತಿಯೊಂದು ವಸ್ತುವಿಗೂ ಬೇರೆ ಬೇರೆ ಕೌನ್ಸಿಲ್‌ಗಳನ್ನು ಸ್ಥಾಪಿಸಲಾಗಿದೆ.

೪) ವ್ಯಾಪಾರ ವಸ್ತುಗಳ ಮಂಡಲಗಳು (Commodity Boards): ಚಹ, ಕಾಫಿ, ಕೈಮಗ್ಗ ಬಟ್ಟೆಗಳು, ರೇಶ್ಮೆ, ಕರಕುಶಲ ಕೈಗಾರಿಕೆ ವಸ್ತುಗಳು, ರಬ್ಬರ್, ಸಣ್ಣ ಪ್ರಮಾಣದ ಉದ್ದಿಮೆಗಳ ವಸ್ತುಗಳು ಮುಂತಾದ ವಸ್ತುಗಳ ಉತ್ಪಾದನೆ ಮತ್ತು ವ್ಯಾಪಾರವನ್ನು ಬೆಳೆಸಲು ಈ ರೀತಿಯ ಬೋರ್ಡುಗಳನ್ನು ಸ್ಥಾಪಿಸಲಾಗಿದೆ.

೫) ಖನಿಜ ಮತ್ತು ಲೋಹಗಳ ವ್ಯಾಪಾರಿ ಸಂಸ್ಥೆ (Minerals and Metals Trading Corporation): ಇದನ್ನು ೧೯೬೩ ಏಪ್ರೀಲ್‌ದಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆ ಖನಿಜ ಮತ್ತು ಲೋಹಗಳ ವ್ಯಾಪಾರಾಭಿವೃದ್ಧಿಗೆ ಸಹಾಯ ಮಾಡುವುದು.

೬) ಭಾರತೀಯ ಪ್ರಮಾಣಗಳ ಅಥವಾ ಮಾನಗಳ ಸಂಸ್ಥೆ (Indian Standards Institute): ಭಾರತದ ವಸ್ತುಗಳ ಗುಣಮಟ್ಟವನ್ನು ನಿರ್ಧರಿಸುವುದು, ಕಾಯ್ದು ಕೊಳ್ಳುವುದು ಹಾಗೂ ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಈ ಸಂಸ್ಥೆಯನ್ನು ೧೯೪೭ ರಲ್ಲಿ ಸ್ಥಾಪಿಸಲಾಯಿತು. ಇದು ಬಹಳ ಮಹತ್ವದ ಪಾತ್ರ ಎಸಗಿದೆ.

೭) ನಿರ್ಯಾತ ವ್ಯಾಪಾರ ನಷ್ಟ-ಭಯ ವಿಮಾ ಕಾರ್ಪೋರೇಶನ್ (Export Risk Insurance Corporation): ಈ ಸಂಸ್ಥೆಯನ್ನು ೧೯೫೭ ರಲ್ಲಿ ಸ್ಥಾಪಿಸಲಾಯಿತು. ಇದು ನಿರ್ಯಾತ ವ್ಯಾಪಾರದಲ್ಲಿಯ ನಷ್ಟ-ಭಯ ನಿವಾರಣೆಗಾಗಿ ವಿಮೆಯನ್ನು ನೀಡುವುದು.

೮) ಭಾರತದ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಶನ್: ಈ ಸಂಸ್ಥೆಯನ್ನು ಮೇ, ೧೯೫೬ ರಲ್ಲಿ ಭಾರತದ ಪರದೇಶ ವ್ಯಾಪಾರದಲ್ಲಿಯ ಹಲವಾರು ಕುಂದುಕೊರತೆಗಳನ್ನು ನಿವಾರಿಸಿ ವ್ಯಾಪಾರದ ಅಭಿವೃದ್ಧಿಗಾಗಿ ಸಹಾಯ ಮಾಡುವ ಉದ್ದೇಶದಿಂದ ಸ್ಥಾಪಿಸಲಾಯಿತು.

೯) ಎಕ್ಸ್‌ಪೋರ್ಟ್ ಕ್ರೆಡಿಟ್ ಅ್ಯಂಡ್ ಗ್ಯಾರಂಟಿ ಕಾರ್ಪೋರೇಶನ್

ಆರ್ಥಿಕ ಉತ್ತೇಜನೆ: ಎಷ್ಟೋ ಸಲ ಸರಕುಗಳ ರಫ್ತಿನ ಸುಂಕವನ್ನು ಹಿಂತೆಗೆದುಕೊಳ್ಳುವುದರ ಜೊತೆಗೆ, ಸ್ವದೇಶಿ ಸರಕುಗಳ ಸುಂಕವನ್ನು ಹಿಂದಕ್ಕೆ ಕೊಡುವ ರೂಪದಲ್ಲಿ ಆರ್ಥಿಕ ಉತ್ತೇಜನ ನೀಡಲಾಗಿದೆ. ನಿರ್ಯಾತ ಮಾಡಿದ ಸರಕುಗಳು ನಿರ್ದಿಷ್ಟ ಅಪೇಕ್ಷಿತ ಪ್ರಮಾಣದವರೆಗೇ ಇರುವ ವಿಚಾರದಲ್ಲಿ, ನಿರ್ಯಾತ ಗುಣನಿಯಂತ್ರಣ ಮತ್ತು ಪರೀಕ್ಷೆ ಕಾಯ್ದೆಯನ್ನು ೧೯೬೩ ರಲ್ಲಿ ಪಾಸುಮಾಡಲಾಯಿತು.

ನಿರ್ಯಾತ ವ್ಯಾಪಾರ ಸಾಲ ಹಾಗೂ ವ್ಯವಹಾರ ಸೌಲಭ್ಯಗಳು: ಭಾರತೀಯ ವ್ಯಾಪಾರಸ್ಥರು ಮತ್ತು ಪರದೇಶ ವ್ಯಾಪಾರಸ್ಥರ ನಡುವೆ ಒಪ್ಪಂದಗಳನ್ನು ಉತ್ತೇಜಿಸುವುದಕ್ಕಾಗಿ, ಸರಕಾರವು ಹಲವಾರು ರಾಷ್ಟ್ರಗಳ ಜೊತೆಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಭಾರತವು ವ್ಯಾಪಾರ ಮತ್ತು ಸುಂಕಗಳ ಕುರಿತ ಸಾಮಾನ್ಯ ಒಪ್ಪಂದ (General Agreements on Trade & tariffs) ಕ್ಕೂ ಒಪ್ಪಿಕೊಂಡಿದೆ. ಬೇರೆ ದೇಶಗಳ ನಡುವಿನ ವ್ಯಾಪಾರ ವೃದ್ಧಿಗಾಗಿ ವ್ಯಾಪಾರ ನಿಯೋಗಗಳ ವಿನಿಮಯವನ್ನು ಉತ್ತೇಜಿಸಲಾಗಿದೆ. ಅಂತರರಾಷ್ಟ್ರೀಯ ವ್ಯಾಪಾರ ಮೇಳ ಹಾಗೂ ಪ್ರದರ್ಶನಗಳಲ್ಲಿ ಭಾರತವು ಯಾವಾಗಲೂ ಭಾಗವಹಿಸುತ್ತ,

ಬಂದಿದೆ. ೧೯೬೬ರಲ್ಲಿ ರೂಪಾಯಿಯ ಮೌಲ್ಯವನ್ನು ಭಾರತವು ಇಳಿಸಿತು. ಇದು ಭಾರತದ ವ್ಯಾಪಾರಾಭಿವೃದ್ಧಿಯಲ್ಲಿ ಬಹಳ ಸಹಾಯಕವಾಗುವದು ಎಂದು ಬಗೆಯಲಾಗಿದೆ.

ವ್ಯಾಪಾರಸ್ಥರಿಗೆ ಸುಲಭ ರೀತಿಯಲ್ಲಿ ದೀರ್ಘ ಅವಧಿ ಸಮಯದಲ್ಲಿ ಸಾಲಸೌಲಭ್ಯಗಳನ್ನು ಒದಗಿಸಲಾಗುವದು. ಇದಕ್ಕೋಸ್ಕರ ಸರಕಾರವು ನಿರ್ಯಾತ ವ್ಯಾಪಾರ ಸಾಲ ಮತ್ತು ಗ್ಯಾರಂಟಿ ಕಾರ್ಪೋರೇಶನ್ನನ್ನು ಸ್ಥಾಪಿಸಿದೆ.

ಈ ರೀತಿ ದೇಶದ ನಿರ್ಯಾತ ವ್ಯಾಪಾರಾಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿದೆ. ಭಾರತದ ಆರ್ಥಿಕ ಅಭಿವೃದ್ಧಿಯ ಅವಶ್ಯಕತೆಗಳನ್ನು ಪೂರೈಸಲು ಭಾರತವು ಇನ್ನೂ ಹೆಚ್ಚು ಹೆಚ್ಚು ನಿರ್ಯಾತಮಾಡಬೇಕಾಗಿದೆ. ಪರದೇಶ ವಿನಿಮಯದ ಕೊರತೆ ಇನ್ನೂ ಕಾಡುತ್ತಿದೆ. ಈ ಎಲ್ಲ ಸಮಸ್ಯೆಗಳು ಭಾರತದ ಅರ್ಥಶಾಸ್ತ್ರಜ್ಞರಿಗೆ, ವಾಣಿಜ್ಯ ತಜ್ಞರಿಗೆ ಹಾಗೂ ಯೋಜಕರಿಗೆ ಹಲವಾರು ಅಡ್ಡಿಗಳನ್ನೊಡ್ಡಿವೆ. ಭಾರತವು ಈಗ ಪರದೇಶಗಳಿಂದ ಸ್ವೀಕರಿಸುವ ಸಹಾಯದ ಪ್ರಮಾಣವನ್ನು ಕಡಿಮೆ ಮಾಡಲು ನಿರ್ಧರಿಸಿದೆ. ಈ ದಿನಗಳಲ್ಲಿ ನಿರ್ಯಾತ ವ್ಯಾಪಾರ ಬಹಳ ಮಹತ್ವದ್ದು. "ನಿರ್ಯಾತ ಮಾಡಿರಿ ಇಲ್ಲವೆ ನಾಶಹೊಂದಿರಿ" (Export or Perish.) ಇದು ಭಾರತೀಯ ಮುತ್ಸದ್ದಿಗಳಿಗೆ ಪ್ರಿಯವಾದ ಹೇಳಿಕೆಯಾಗಿದೆ.

ಆಯಾತ-ಬದಲಿ ಧೋರಣೆ

(Import Substitution Policy)

ನಮ್ಮ ನಿರ್ಯಾತದ ಇಳಿಕೆ ಹಾಗೂ ಆಯಾತದ ಏರಿಕೆಯಿಂದ ವಿದೇಶಿ ವ್ಯಾಪಾರ ವಿನಿಮಯದ ಕೊರತೆ ಹೆಚ್ಚಾಯಿತು. ಈ ವಿಷಮ ಪರಿಸ್ಥಿತಿಯನ್ನು ಎದುರಿಸಲು, ವಿದೇಶಿ–ಆಯಾತ ಸಾಮಗ್ರಿಗಳಿಗೆ ಬದಲಾಗಿ ಸ್ವದೇಶಿ–ಸಾಮಗ್ರಿಗಳನ್ನು ಉತ್ಪಾದಿಸುವ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಧೋರಣೆಗೆ 'ಆಯಾತ–ಬದಲಿ ಯೋಜನೆ' ಎನ್ನುವರು.

ಕಳೆದ ೨೦ ವರ್ಷಗಳಲ್ಲಿ, ಆಯಾತ ವಸ್ತುಗಳ ಜಾಗದಲ್ಲಿ ದೇಶೀಯ ವಸ್ತುಗಳನ್ನು ಉತ್ಪಾದಿಸುವಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಒಟ್ಟು ಉತ್ಪಾದನೆಯಲ್ಲಿ, ಆಯಾತ ಮಾಡಿಕೊಂಡ ವಸ್ತುಗಳ ಶೇಕಡಾವಾರು ಪ್ರಮಾಣದಲ್ಲಿ ಇಳಿಕೆ ಉಂಟಾಗಿದೆ. ಮೂಲ ಉದ್ಯಮಗಳಾದ ಕಬ್ಬಿಣ, ಉಕ್ಕು, ಅಲ್ಯುಮಿನಿಯಮ್, ರಾಸಾಯನಿಕ ಗೊಬ್ಬರಗಳು, ಪೆಟ್ರೋಲಿಯಮ್ ಮುಂತಾದವುಗಳಲ್ಲಿ ದೇಶೀಯ ಉತ್ಪನ್ನ ಹೆಚ್ಚಾಗಿದೆ. ಬಳಕೆಯ ವಸ್ತುಗಳಾದ ಬೈಸಿಕಲ್, ವಿದ್ಯುತ್ ಉಪಕರಣಗಳು ಪಂಖಾ ಮುಂತಾದವುಗಳ ಉತ್ಪಾದನಾ ಉದ್ಯಮಗಳು ಆಂತರಿಕ ಬೇಡಿಕೆಯನ್ನು ಪೂರೈಸಿರುವದಲ್ಲದೆ, ನಿರ್ಯಾತ

ಮೆಚ್ಚಬಹುದಾದ ಪ್ರಗತಿ ತೋರಿಸಿದೆ. ಕೃಷಿಕ ಬೆಳೆಗಳ ಉತ್ಪಾದನೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಿರುವುದರಿಂದ, ಇಂದು ಕೃಷಿಕ ಸಾಧನಗಳ ಆಯಾತವನ್ನು ನಿಷೇಧಿಸಲಾಗಿದೆ. ಕಾಗದದ ಉತ್ಪಾದನೆಯಲ್ಲಿ ಭಾರತ ಸ್ವಯಂಪೂರ್ಣವಾಗಿದ್ದರೂ, ವೃತ್ತಪತ್ರ ಮುದ್ರಣ ಕಾಗದದ ವಿಷಯದಲ್ಲಿ ಮಾತ್ರ ಕೊರತೆ ಇನ್ನೂ ಉಳಿದುಬಂದಿದೆ. ಸರಕಾರವು ನಿರ್ಯಾತವನ್ನು ಹೆಚ್ಚಿಸಲು, ಆಯಾತ ವ್ಯಾಪಾರದಲ್ಲಿ ಪ್ರಗತಿ ತೋರಿಸಿದ ಸಂಸ್ಥೆಗಳಿಗೆ ಆಯಾತ ಸೌಲಭ್ಯ ನೀಡಿತು. ಆಯಾತವನ್ನು ಮಿತಗೊಳಿಸಲು, ನಾವು ಆಯಾತ ಮಾಡಿ ಕೊಳ್ಳುತ್ತಿರುವ ವಸ್ತುಗಳನ್ನು ಇಲ್ಲಿಯೇ ಉತ್ಪಾದಿಸಲು ಅವಕಾಶಗಳಿವೆ. ವಿದೇಶಿ ವಿನಿಮಯದ ಕೊರತೆಯನ್ನು ನೀಗಿಸಲು, ನಿರ್ಯಾತ ವ್ಯಾಪಾರ ಹೆಚ್ಚಿಸುವುದರ ಜೊತೆಗೆ ಆಯಾತ ವಸ್ತುಗಳನ್ನು ಸ್ವದೇಶದಲ್ಲಿ ತಯಾರಿಸುವುದು ಹೆಚ್ಚು ಲಾಭದಾಯಕ. ಇದರಿಂದ ದೇಶೀ ಉತ್ಪಾದನೆ ವಿದೇಶಿ ವಿನಿಮಯ ಗಳಿಸುವುದಲ್ಲದೇ, ಹೊಸ ಉದ್ಯೋಗಾವಕಾಶಗಳನ್ನು ಕಲ್ಪಿಸಿ, ನಮ್ಮ ಆದಾಯ ಮತ್ತು ಜೀವನ ಮಟ್ಟವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.

ಉಪಸಂಹಾರ

ಆರ್ಥಿಕ ಯೋಜನೆಗಳ ಫಲವಾಗಿ, ಭಾರತದಲ್ಲಿ ಔದ್ಯೋಗಿಕ ಹಾಗೂ ವ್ಯವಸಾಯದ ಉತ್ಪಾದನೆ ಹೆಚ್ಚಿದೆ. ಈ ಉತ್ಪಾದನೆಯನ್ನು ಅಧಿಕ ಉತ್ಪಾದನಾ ಸ್ಥಳದಿಂದ ಅವಶ್ಯಕತೆಯ ಸ್ಥಳಕ್ಕೆ ಸಾಗಿಸುವುದು ಅತ್ಯವಶ್ಯಕ. ವಸ್ತುಗಳನ್ನು ಉತ್ಪಾದನೆಯ ಮೂಲದಿಂದ ಬಳಕೆದಾರರಿಗೆ ಸಾಗಿಸುವದರಲ್ಲಿ ಭಾರತೀಯ ವಾಣಿಜ್ಯ ರಂಗ ಮಹತ್ವದ ಪಾತ್ರವಹಿಸಿದೆ. ಆರ್ಥಿಕ ರಂಗದ ಬೆಳವಣಿಗೆಗೆ ಹೊಂದಿಕೊಂಡು, ವಾಣಿಜ್ಯ ರಂಗವು ಇಂದು ಬೆಳೆದು ಬಂದಿದೆ. ಆರ್ಥಿಕ ಯೋಜನೆಗಳು ಸಫಲಯೋಗವಾಗಬೇಕಾದರೆ, ವಾಣಿಜ್ಯ ರಂಗದ ಅಭಿವೃದ್ಧಿಯಾಗಬೇಕಾದುದು ಅವಶ್ಯ. ಉದಾಹರಣೆ, ಭಾರತ ಸರಕಾರವು ವಾಣಿಜ್ಯ ರಂಗದ ವಿವಿಧ ಅಂಗಗಳಾದ ಸಾರಿಗೆ, ವಿಮೆ, ಬ್ಯಾಂಕು, ವ್ಯವಸಾಯ, ಉದ್ಯೋಗ ಮತ್ತು ಸಂಗ್ರಹಣೆ ಮುಂತಾದವುಗಳಿಗೆಲ್ಲ ಅವಶ್ಯವಾದ ಪ್ರೋತ್ಸಾಹವನ್ನು ನೀಡಬೇಕು. ಇಂದು ಬದಲಾದ [illegible] ಜನಸಾಮಾನ್ಯರ [illegible] ವಿತರಣೆಗೆ [illegible] ಕೊಡಬೇಕಾಗಿದೆ. [illegible] ಮತ್ತು ಹಾಗೂ [illegible]

ಪ್ರಗತಿದಾಯಕವಾದ ಆದಾಯ ಹಾಗೂ ಬೆಲೆ ಸೂತ್ರಗಳನ್ನು ಸರಕಾರ ಅನುಷ್ಠಾನಕ್ಕೆ ತರಬೇಕಾಗಿದೆ. ವ್ಯಾಪಾರಿ ವರ್ಗವನ್ನು ಆರ್ಥಿಕ ಶಿಸ್ತಿಗೆ ಒಳಪಡಿಸಬೇಕಾಗಿದೆ. ಈಗ ಭಾರತದಲ್ಲಿ ವಾಣಿಜ್ಯ ಕ್ರಾಂತಿ ನಡೆದಿದೆ. ಆಂತರಿಕ ವ್ಯಾಪಾರ ಹಾಗೂ ಪರದೇಶ ವ್ಯಾಪಾರ ಈ ಎರಡೂ ರಂಗಗಳು ಯಾವ ಅಡೆತಡೆಗಳಿಲ್ಲದೆ ಬೆಳೆಯುವಂತೆ ಪ್ರೋತ್ಸಾಹಿಸಿ ಸರ್ವ ಕಲ್ಯಾಣ ಕಾರಕ ನಿಯಂತ್ರಣಗಳನ್ನು ಮಾತ್ರ ಹೇರಿದಲ್ಲಿ, ದೇಶದ ಆರ್ಥಿಕ ಅಭಿವೃದ್ಧಿಗೆ ಈ ರಂಗಗಳು ವಿವಿಧ ಮುಖ ಸಹಾಯ ನೀಡಬಲ್ಲವು ಎಂಬುವದರಲ್ಲಿ ಯಾವ ಸಂದೇಹವೂ ಇಲ್ಲ.

ಈಗಿನ ಆರ್ಥಿಕ, ಔದ್ಯೋಗಿಕ ಮತ್ತು ವಾಣಿಜ್ಯ ನೀತಿಗಳಲ್ಲಿ ಸರಕಾರದ ಹಾಗೂ ಸಾರ್ವಜನಿಕಾಭಿಪ್ರಾಯದ ಒಲವು ವ್ಯಕ್ತಿಯಿಂದ ಸಮಷ್ಟಿಯೆಡೆಗೆ ಒಲಿಯುತ್ತಿದೆ. ಸರ್ವಜನರ ಹಿತರಕ್ಷಣೆ, ರಾಷ್ಟ್ರದ ಸರ್ವತೋಮುಖವಾದ ಅಭಿವೃದ್ಧಿ ಇವುಗಳೇ ಪ್ರಜಾಪ್ರಭುತ್ವದ ನೀತಿಯೂ ಆಗಿದೆ. "ಸಾಮಾಜಿಕ ಕ್ಷೇಮ ಚಿಂತನ ರಾಜ್ಯ" (Social welfare State) ವೇ ಇಂದಿನ ಸರಕಾರದ ಗುರಿಯಾಗಿದೆ. ಈ ಧ್ಯೇಯದಂತೆ, ರಾಷ್ಟ್ರದ ಉನ್ನತಿಗೆ ಮತ್ತು ಪ್ರಜಾಕ್ಷೇಮಕ್ಕೆ ಕಾರಣಗಳಾದ ಯಾವವೇ ಆರ್ಥಿಕ ಕ್ಷೇತ್ರಗಳು, ವ್ಯಕ್ತಿಗಳ ಅಧೀನದಲ್ಲಿರದೆ ರಾಷ್ಟ್ರದ ಅಧೀನದಲ್ಲಿರಬೇಕು ಎಂಬ ವಾದ ಎಲ್ಲಕಡೆಗೂ ಕೇಳಿಬರುತ್ತಿದೆ. ಇದರಂತೆ ಎಲ್ಲ ಮುಖ್ಯ ಆರ್ಥಿಕ ಕ್ಷೇತ್ರಗಳು ಮತ್ತು ಚಟುವಟಿಕೆಗಳು ರಾಷ್ಟ್ರೀಕರಣವಾಗಬೇಕು ಎಂಬ

ವಾದ ಪ್ರಚಾರದಲ್ಲಿದೆ. ಈ ವಾದ ಹೊಸವಲ್ಲ. ೧೯ ನೇ ಶತಮಾನದ ಅಂತ್ಯದಲ್ಲಿ ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಕೆಲವು ಆರ್ಥಿಕ ಕ್ಷೇತ್ರಗಳು, ಅದರಲ್ಲೂ ಬ್ಯಾಂಕು ವ್ಯವಹಾರ ಸಾರಿಗೆ ಮುಂತಾದವುಗಳು ವ್ಯಕ್ತಿಗಳ ಅಧೀನದಲ್ಲಿರಬಾರದು ಮತ್ತು ರಾಷ್ಟ್ರೀಕರಣವಾಗಬೇಕೆಂಬ ಕೂಗು ಪ್ರಾರಂಭವಾಯಿತು. ಅದರಂತೆ ಕೆಲವು ಕ್ಷೇತ್ರಗಳು ರಾಷ್ಟ್ರೀಕರಣಗೊಂಡವು.

ಎರಡನೆಯ ಮಹಾಯುದ್ಧದವರೆಗೂ ವಾಣಿಜ್ಯ ಮತ್ತು ವ್ಯಾಪಾರದ ಉದ್ಯಮಗಳು ಖಾಸಗಿಯವರಿಂದಲೇ ನಡೆಯುತ್ತಿದ್ದವು. ಸರಕಾರ ಈ ಉದ್ಯಮಗಳಲ್ಲಿ ನೇರವಾಗಿ ಪಾತ್ರವಹಿಸುತ್ತಿರಲಿಲ್ಲ. ಆದರೆ ಎರಡನೆಯ ಮಹಾಯುದ್ಧದ ಕಾಲದಲ್ಲಿ ಎಲ್ಲ ದೇಶಗಳಲ್ಲಿಯೂ ಯುದ್ಧೋಪಕರಣಗಳ ಉತ್ಪಾದನೆಗೆ ಪ್ರಾಮುಖ್ಯತೆ ಹೆಚ್ಚಾಗಿ, ನಿತ್ಯದ ಬಳಕೆಯ ವಸ್ತುಗಳ ಉತ್ಪಾದನೆ ಕಡಿಮೆಯಾಗುತ್ತ ಬಂದಿತು. ಅಲ್ಲದೆ ಪೂರ್ವ ರಾಷ್ಟ್ರಗಳಲ್ಲಿ ಅನೇಕ ಕಾರಣಗಳಿಂದ ಆಹಾರದ ಕೊರತೆ ಹೆಚ್ಚಾಗುತ್ತ ಬಂದಿತು. ಸಾರಿಗೆಯ ವ್ಯವಸ್ಥೆಯಲ್ಲೂ ವ್ಯಾಪಾರಿಗಳು ಬಹಳ ತೊಂದರೆನ್ನು ಎದುರಿಸಬೇಕಾಯಿತು. ಹೀಗಾಗಿ ದೇಶ-ವಿದೇಶಗಳಲ್ಲಿಯ ವ್ಯಾಪಾರ ಕುಂಠಿತವಾಯಿತು. ಇದರಿಂದ ಸರಕಾರವು ಈ ಉದ್ಯಮಗಳಲ್ಲಿ ಕೈಹಾಕಬೇಕಾಯಿತು. ಈ ಪದ್ಧತಿಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸರಕಾರವು ಕಾಯಿದೆಗಳ ಮೂಲಕ, ವ್ಯಾಪಾರ ವಾಣಿಜ್ಯ ಕ್ಷೇತ್ರಗಳಲ್ಲಿ ನಿರತರಾಗಿರುವವರ ಮೇಲೆ ಕೆಲವು ನಿರ್ಬಂಧ

ಗಳನ್ನು ಹಾಕಿ, ಉಪಯುಕ್ತ ಸರಕುಗಳನ್ನು ಕೊಳ್ಳುವ ಮತ್ತು ಮಾರುವ ಉದ್ಯಮವನ್ನು ಖಾಸಗಿಯವರ ಕೈ ತಪ್ಪಿಸಿ, ತಾನೇ ವಹಿಸಿಕೊಂಡಿತು. ಸಹಕಾರಿ ಸಂಸ್ಥೆಗಳ ಮುಖಾಂತರವೂ ಕೆಲವು ಸಂದರ್ಭಗಳಲ್ಲಿ ಲೈಸೆನ್ಸ್ ಪಡೆದ ವರ್ತಕರ ಮೂಲಕವೂ ವ್ಯಾಪಾರ ನಡೆಸಲಾರಂಭಿಸಿತು.

ಇದಲ್ಲದೆ ಔದ್ಯೋಗಿಕ ಕ್ಷೇತ್ರದಲ್ಲಿ ಪೂರ್ಣ ಬಂಡವಾಳ ವನ್ನು ಸರಕಾರವೇ ಹಾಕಿ, ಉತ್ಪಾದನಾ ಕಾರ್ಯವನ್ನು ಸಹ ನಡೆಸಿತು. ಇದರಿಂದಾಗಿ ವಾಣಿಜ್ಯ ಕ್ಷೇತ್ರದಲ್ಲಿ ಸಾರ್ವಜನಿಕ ರಂಗ (Public Sector) ಮತ್ತು ಖಾಸಗಿರಂಗ (Private Sector) ಎಂಬ ಎರಡು ಶಾಖೆಗಳಾಗಿ ವಾಣಿಜ್ಯ ಸಂಘಟನಾ ಸ್ವರೂಪದಲ್ಲಿ ಬಹಳ ಬದಲಾವಣೆಗಳಾದವು. ಅಲ್ಲದೆ ಇತರ ಸಮಸ್ಯೆಗಳೂ ಹುಟ್ಟಿದವು.

ಈಗಿನ ವಾಣಿಜ್ಯ ಪ್ರಪಂಚದಲ್ಲಿ ಎಲ್ಲ ವಾಣಿಜ್ಯೋದ್ಯಮ ಗಳನ್ನು ಅದರಲ್ಲಿಯೂ ವ್ಯಾಪಾರೋದ್ಯಮವನ್ನು ಸರಕಾರವೇ ನಡೆಸುವದು ಸಾಧುವೇ ? ಮತ್ತು ಸಾಧ್ಯವೇ ? ಇದರಿಂದ ಜನರ ಹಿತರಕ್ಷಣೆ ಆಗುವದೇ ? ಇಲ್ಲವೇ ಸರಕಾರ ನೀತಿ ನಿಯಮಗಳನ್ನು ಮಾತ್ರ ನಿರೂಪಿಸಿ, ವ್ಯಾಪಾರ ಕ್ಷೇತ್ರವನ್ನು ಖಾಸಗಿಯವರಿಗೆ ಬಿಡುವದರಿಂದ ಜನರ ಹಿತರಕ್ಷಣೆ ಆಗುವ ದಿಲ್ಲವೇ ? ಈ ರೀತಿ ಅನೇಕ ಜಟಿಲ ಸಮಸ್ಯೆಗಳು ಹುಟ್ಟುತ್ತವೆ. ಈಗಿನ ಪ್ರಜಾಪ್ರಭುತ್ವ ಸರಕಾರಕ್ಕೆ ಖಾಸಗಿಯವರಿಂದ ಸಾಧ್ಯ ವಾಗದ ಅನೇಕ ಕೆಲಸಗಳಿರುತ್ತವೆ. ರಾಷ್ಟ್ರದ ಉನ್ನತಿಗೂ,

ಜನರ ಹಿತರಕ್ಷಣೆಗೂ ಕಾರಣಗಳಾದ ಮೂಲ ಕೈಗಾರಿಕೆಗಳು, ನೀರಾವರಿ ಕೆಲಸಗಳು, ಸಾರಿಗೆ ವ್ಯವಸ್ಥೆ, ಸಂಪರ್ಕ, ದೇಶದ ರಕ್ಷಣೆ ಇವುಗಳ ಕಡೆ ಸರಕಾರ ತನ್ನ ಪೂರ್ಣಗಮನಕೊಡುವದು ಅತ್ಯಾವಶ್ಯಕವಾಗಿದೆ.

ವಾಣಿಜ್ಯ ಮತ್ತು ವ್ಯಾಪಾರೋದ್ಯಮಗಳು ಸಾಮಾನ್ಯವಾಗಿ ಸ್ವತಂತ್ರ ಆರ್ಥಿಕ ವ್ಯವಸ್ಥೆಯುಳ್ಳ ಎಲ್ಲ ದೇಶಗಳಲ್ಲಿಯೂ ಖಾಸಗಿಯವರಿಂದಲೇ ನಡೆಯುತ್ತಿರುವುದು, ಪ್ರಜಾ ಸಮುದಾಯಕ್ಕೆ ಹೆಚ್ಚು ಉಪಯೋಗವಾಗಿದೆ. ಆದ್ದರಿಂದ ವಾಣಿಜ್ಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಖಾಸಗಿಯವರಿಗೆ ಮೊದಲಿನಂತೆ ಸ್ವಾತಂತ್ರ್ಯ ದೊರೆತು, ಖಾಸಗಿಯವರೂ ಸಹ ಸರಕಾರವು ನಿರೂಪಿಸುವ ನೀತಿನಿಯಮಗಳನ್ನು ಅನುಸರಿಸಿ, ಅತಿ ಲಾಭಕ್ಕೆ ಆಶಿಸದೆ, ಗ್ರಾಹಕರ ಅಥವಾ ಬಳಕೆದಾರರ ವಿಚಾರದಲ್ಲಿ ಸಹಾನುಭೂತಿಯಿಂದ ವರ್ತಿಸಿದಲ್ಲಿ, ದೇಶದ ಕಲ್ಯಾಣವಾಗುವದೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು.